ಅದು ಜೈನರ ಅಥವಾ ಬೌದ್ಧರ ಮತಸಂಬಂಧವಾದ ಧರ್ಮ ಸಂಸ್ಥೆಗಳಿಗೆ ಮತ್ತು ಹಿಂದೂ ಸಂಸ್ಥೆಗಳಿಗೆ ಅನ್ವಯಿಸುತ್ತದೆಯೇ ಎಂಬುದನ್ನು ತಿಳಿಯಬೇಕಾಗಿದೆ. ನನ್ನ ಅಭಿಪ್ರಾಯವನ್ನು ಕೇಳಿದ ಕಾರಣ ನಭೆಯಲ್ಲಿ ಒಂದು ಸಣ್ಣ ಸೂಚನೆಯನ್ನು ತಂದಾಗಲೇ ಹೇಳಿದ್ದೇನೆ. ಆ ಮೇಲೆ ಆರ್ಟಿಕಲ್ 15ರ ಪ್ರಕಾರ (ಫಂಡಮೆಂಟಲ್ ರೈಟ್ಸ್) ಧಾರ್ಮಿಕ ಸಂಸ್ಥೆಗಳಲ್ಲಿ ಹರಿಜನರಲ್ಲದೇ ಇರುವವರು ಅನುಭವಿಸುತ್ತಿದ್ದಾರೆ. ಅವು ಸಾರ್ವಜನಿಕ ಸಂಸ್ಥೆಗಳಾಗುವುದಿಲ್ಲವೆ?

ಮಾನ್ಯ ಶ್ರೀ ಆರ್. ಜೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅದಕ್ಕಾಗಿಯೇ ಈ ಮಸೂದೆಯನ್ನು ತರಲಾಗಿರುವುದು.

ಶ್ರೀ ಎಂ. ಮಾದಯ್ಯನವರು.—ಶ್ರೀ ಗುಂಡಪ್ಪಗೌಡರು ಹೇಳಿದಂತೆ ಬೊಂಬಾಯಿ ಹೈಕೋರ್ಟಿನಲ್ಲಿ

ಎಷ್ಟುಮಟ್ಟಿಗೆ ತೀರ್ಮಾನವಾಗುತ್ತದೆಯೋ ತಿಳಿಯದು. ಆದರೆ ಇವರ ವಿಚಾರದಲ್ಲಿ ವಿವರಣೆ ಕೊಟ್ಟರೆ ಚೆನ್ನಾಗಿರುತ್ತದೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಷ್ಟೊಂದು ಭಿನ್ನಾಭಿಪ್ರಾಯಕ್ಕೆ ಕಾರಣವಿಲ್ಲ. ಆರ್ಟಿಕಲ್ 25ರಲ್ಲಿ ಸ್ಪಷ್ಟವಾಗಿ ಹೇಳಿದೆ. ಕ್ಲಾಜ್ (2) ರ ಸಬ್ ಕ್ಲಾಜು (b) ನಲ್ಲಿ ಹಿಂದೂ ಎಂದರೆ ಯಾರ್ಯಾರು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅದರಲ್ಲಿ ಜೈನರೂ ಇರುತ್ತಾರೆ. ನಾವು ಜೈನರಿಗೆ ಸಂಬಂಧಪಟ್ಟ ವಿಚಾರದಲ್ಲಿ ಮಾತ್ರ ಈಗ ಪ್ರವೇಶಮಾಡ್ದೇವೆ. ಮೊದಲೇ ಈ ವಿಚಾರವು ವಿಶದವಾಗಿತ್ತು. ಕೆಲವರು ಅನುಮಾನ ಪಟ್ಟಿದ್ದರಿಂದ ಅದನ್ನು ಸ್ಪಷ್ಟಪಡಿಸುವುದಕ್ಕಾಗಿ ಈಗ ತಿದ್ದುಪಡಿಯನ್ನು ತಂದಿದೆಯೇ ಹೊರತು ಮತ್ತೆ ಬೇರೆ ಏನೂ ಅಲ್ಲ. ಇಂಥ ಸನ್ನಿವೇಶ ಒರಿಸ್ಸಾದಲ್ಲಿತ್ತು. ಅಲ್ಲಿ 1948ರಲ್ಲಿ ಇದೇ ರೀತಿಯ ದೇವಾಲಯ ಪ್ರವೇಶದ ಆಕ್ಟು ಅಂಗೀಕೃತವಾಗಿದೆ. ಅದರಲ್ಲಿ ಹಿಂದೂ ಎಂದರೆ ಜೈನರು, ಬೌದ್ಧರು ಮತ್ತು ಸಿಕ್ಖರು ಸೇರುತ್ತಾರೆ. ಆದನ್ನೇ ಕಾಪಿ ಮಾಡಿ ನಾವು ಹಿಂದೆ ಮಸೂದೆಯನ್ನು ತಂದಿದ್ದೆವು. ಈಗ ಅಷ್ಟು ಭಯ ಬೇಕಾಗಿಲ್ಲ. ಮೈಸೂರು ಹೈಕೋರ್ಟಿನಲ್ಲಿ ಕೂಡ ಈಚೆಗೆ 1945ರಲ್ಲಿ ಇದು ಇತ್ಯರ್ಥವಾಗಿದೆ ಮತ್ತು ನಮ್ಮಲ್ಲಿ ಜಾರಿಯಲ್ಲಿದೆ. ಇದು ಜೈನರಿಗೆ ಸಾಮಾನ್ಯವಾಗಿ ಅನ್ವಯಿಸುತ್ತದೆ. ಅಂಥ ಸಂದರ್ಭದಲ್ಲಿ ಅನುಮಾನಕ್ಕೆ ಅವಕಾಶವಿಲ್ಲ ಎಂದು ತಿಳಿಸಿರೆ ಸರ್ಕಾರಿದೆ. ಈ ಮಸೂದೆಯನ್ನು ಅನುಮಾನ ಪರಿಹಾರಮಾಡುವ ಸಲುವಾಗಿ ತಂದಿದ್ದಾರೆಯೇ ಹೊರತು ಮತ್ತೆ ಬೇರೆ ಅಲ್ಲ.

ಶ್ರೀ ಎಂ. ಮಾದಯ್ಯನವರು.—ಜೈನ ಸಂಸ್ಥೆಗಳು ಎಷ್ಟಿವೆಯೆಂಬುದನ್ನು ನೋಡಿ ಹೇಳಬೇಕು.

ಶ್ರೀ ಎಸ್. ರಂಗರಾವಯ್ಯನವರು (ಮೈಸೂರು ಜಿಲ್ಲೆ).—ಹಿಂದೂ ಎಂದರೆ ಜೈನರು, ಬೌದ್ಧರು, ಸಿಕ್ಖರು ಇವರೆಲ್ಲಾ ಸೇರುತ್ತಾರೆಂದು ಹೇಳಿದಿರಿ. ರಾಜ್ಯಾಂಗದ ಪ್ರಕಾರ ಹಾಗೆ ಅವಕಾಶ ಇದ್ದರೆ ಅದನ್ನು, ಈ ಕಾನೂನಿನಲ್ಲಿ ಅಡಕ ಮಾಡುವುದು ಒಳ್ಳೆಯದು. ಮುಂದೆ ಬೇಕಾದಾಗ ಉಪಯೋಗವಾಗುತ್ತದೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ಅದು ಬೇಕಾಗಿಲ್ಲ. ಮುಂದೆ ಅವಶ್ಯಕತೆ ಕಂಡರೆ ಮಾಡೋಣ.

Mr. SPEAKER.— The question is :

"That the Mysore Temple Entry Authorisation (Amendment) Bill, 1951, be taken into consideration."

The Motion was adopted.

Mr. SPEAKER.—The clauses of the Bill will now be submitted to the Assembly. Clauses 2 and 3. The question is :

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.— Clause 1. The question is :

"That clause 1 stand part of the Bill."

The motion was adopted.

Clause 1 was added to the Bill.

Mr. SPEAKER. Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri H. SIDDAIYA.—Sir, I beg to move :

'That the Mysore Temple Entry Authorisation (Amendment) Bill, 1951, be passed."

Mr. SPEAKER. The question is :

"That the Mysore Temple Entry Authorisation (Amendment) Bill, 1951, be passed."

The motion was adopted.

Mysore Survey and Boundaries Bill, 1951.

Motion to consider.

The Hon'ble Sri R. CHENNIGARAMIAH (Minister for Local-Self-Government).—Sir, I beg to move :

"That the Mysore Survey and Boundaries Bill, 1951, be taken into consideration."

ಈ ಮಾನ್ಯ ಸಭೆಯವರಿಗೆ ತಿಳಿದಿರುವಂತೆ ಹಿಂದಿನ ಅಧಿವೇಶನದಲ್ಲಿ ಈ ರೀತಿಯ ಒಂದು ಮಸೂದೆಯನ್ನು ಸಭೆಯ ಮುಂದೆ ತೆಗೆದುಕೊಂಡು ಬಂದು ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಲಾಗಿತ್ತು. ಆ ಸೆಲೆಕ್ಟ್ ಕಮಿಟಿಯಲ್ಲಿ ಮಾನ್ಯ ಸದಸ್ಯರು ಅದನ್ನು ಬಹಳ ವಿಶದವಾಗಿ ಪರಿಶೀಲನೆ ಮಾಡಿ, ಆ ಮಸೂದೆ ನಮ್ಮ ದೇಶಕ್ಕೆ ಅಷ್ಟು ಪ್ರಯೋಜನವಾಗುವುದಿಲ್ಲವೆಂಬ ಅಭಿಪ್ರಾಯವನ್ನು ಸೂಚಿಸಿದರು. ಅದು ಬೊಂಬಾಯಿ ಮತ್ತು ಮದರಾಸುಗಳಲ್ಲಿರತಕ್ಕ ಕಾನೂನುಗಳೆರಡನ್ನೂ ಸೇರಿಸಿ ತಯಾರಾಗಿತ್ತು. ಅದರಿಂದ ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿಲ್ಲವೆಂದೂ ಬೇರೊಂದು ಮಸೂದೆಯನ್ನು ತಯಾರಿಸುವುದು ಉತ್ತಮವೆಂದೂ ಆ ಸಮಿತಿಯ ಸದಸ್ಯರು ಸಲಹೆ ಕೊಟ್ಟರು. ಅದರಂತೆ ಸರ್ಕಾರದವರು ಪರಿಶೀಲನೆ ಮಾಡಿ ಅವರ ಸಲಹೆಯಂತೆ ಮಾಡುವುದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆಂದು ಆ ಮಸೂದೆಯನ್ನು ಬಿಟ್ಟು ಬೇರೊಂದು ಮಸೂದೆಯನ್ನು ಮದರಾಸಿನ ಕಾನೂನಿನ ರೀತಿಯಲ್ಲಿ ತಯಾರು ಮಾಡಿದರೆ ನಮ್ಮ ದೇಶಕ್ಕೆ ಸಹಾಯವಾಗುತ್ತದೆ, ನಮ್ಮ ಉದ್ದೇಶ ನೆರವೇರುತ್ತದೆ ಎಂಬ ಅಭಿಪ್ರಾಯದಿಂದ ಸೆಲೆಕ್ಟ್ ಕಮಿಟಿಯವರ ಅಭಿಪ್ರಾಯದಂತೆ ಹಿಂದೆ ತಂದಿದ್ದ ಮಸೂದೆಯನ್ನು ವಾಪಸು ತೆಗೆದುಕೊಂಡು

(THE HON'BLE SRI R. CHENNIGARAMIAH.)

ಹೊಸವಾಗಿ ಈ ಮಸೂದೆಯನ್ನು ಸಭೆಯ ಮುಂದೆ ತರಲಾಗಿದೆ. ಇದು ಬಹು ಮುಖ್ಯವಾದ ವಿಚಾರ. ಇದು ಬರಿಯ ಸಿಟಿ ಮುನಿಸಿಪಾಲಿಟಿಗಳಿಗೆ ಅಥವಾ ಕಾರ್ಪೊರೇಷನ್ನಿಗೆ ಮಾತ್ರ ಅನ್ವಯಿಸುವುದಿಲ್ಲ. ಟೌನ್ ಮುನಿಸಿಪಾಲಿಟಿಗಳು, ಸಿಟಿ ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್ ಇವೆಲ್ಲಕ್ಕೂ ಅನ್ವಯಿಸತಕ್ಕ ದ್ದಾಗಿದೆ. ಈಗಿರತಕ್ಕ ವ್ಯವಸ್ಥೆಯಲ್ಲಿ ಯಾರ ಯಾರ ಹದ್ದುಬಸ್ತು ಎಷ್ಟೆಷ್ಟು, ಮನೆಗಳಿವೆ ಎಂಬ ಬಗ್ಗೆ ಸರಿಯಾದ ದಾಖಲೆ ಮುನಿಸಿಪಾಲಿಟಿಯಲ್ಲಿ ಸಿಕ್ಕುವುದಿಲ್ಲ. ಇದರಲ್ಲಿರುವಂತ ಸರ್ವೆ ಮಾಡಿ ಮ್ಯಾಪುಗಳನ್ನು ತಯಾರಿಸಿ ಸರಿಯಾದ ದಸ್ತಾವೇಜುಗಳನ್ನಿಟ್ಟುಕೊಂಡರೆ ಒಳ್ಳೆಯದು. ಈಗ ಅನೇಕ ಕಡೆ unauthorised constructions, unauthorise l occupations ಆಗುತ್ತಿವೆ ಈ ಕಾನೂನು ಬಂದರೆ ಈ ರೀತಿ ಆಗುವುದಿಲ್ಲ. ಮದರಾಸಿನಲ್ಲಿ ಬಹಳ ಚೆನ್ನಾಗಿಟ್ಟುಕೊಂಡಿದ್ದಾರೆ. ಯಾವುದೇ ಅಕ್ರಮ ಕಟ್ಟಡಗಳಾದರೂ ತಕ್ಷಣ ಪತ್ತೆ ಮಾಡುತ್ತಾರೆ. ದಸ್ತಾವೇಜುಗಳನ್ನು ಬಹಳ ಚೆನ್ನಾಗಿ ಇಟ್ಟಿದ್ದಾರೆ. ಇದರಿಂದ ಜನಗಳಿಗೂ ಅನುಕೂಲ, ಮುನಿಸಿಪಾಲಿಟಿಗಳಿಗೂ ಅನುಕೂಲ. ಇದು ಎಲ್ಲ ದೃಷ್ಟಿಯಿಂದಲೂ ಉತ್ತಮವಾದ ಮಸೂದೆಯಾಗಿರುವುದರಿಂದ ಇದನ್ನು ಸಭೆಯಲ್ಲಿ ಸರ್ವರೂ ಒಪ್ಪಬೇಕೆಂದು ಕೋರುತ್ತೇನೆ.

Mr. SPEAKER.—Motion moved:

"That the Mysore Survey and Boundaries Bill, 1951, be taken into consideration."

Sri V. S. Narayana Rao has tabled an amendment for reference to Select Committee.

Sri V. S. NARAYANA RAO (Bangalore City—General Urban).—I am not moving my amendment Sir.

Mr. SPEAKER.—The question is:

"That the Mysore Survey and Boundaries Bill, 1951, be taken into consideration."

The motion was adopted.

Mr. SPEAKER.—The clauses of the Bill will now be submitted to the Assembly. Clause 2. Sri W H. Hanumanthappa has tabled an amendment to it.

Sri W. H. HANUMANTHAPPA (Bangalore District—General).—I am not moving my amendment.

Mr. SPEAKER.—The question is:

"That Clauses 2 to 21, both inclusive, stand part of the Bill.

Clauses 2 to 21, both inclusive, were added to the Bill.

The motion was adopted.

Mr. SPEAKER.—Clause 1. The question is:

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is:—

'That the Title and the Preamble stand part of the Bill."

The motion was adopted.

Title and Preamble were added to the Bill.

Motion to pass.

The Hon'ble Sri R. CHENNIGARAMIAH.—Sir I beg to move:

"That the Mysore Survey and Boundaries Bill, 1951, be passed."

Mr. SPEAKER. The question is:

"That the Mysore Survey and Boundarie Bill, 1951, be passed."

The motion was adopted.

Mysore State Aid to Industries Bill, 1951.

Motion to consider.

The Hon'ble Sri H C. DASAPPA (Minister for Industries and Finance).—Sir I beg to move:—

"That the Mysore State Aid to Industries Bill, 1951, be taken into consideration."

I would just like to make a few remarks in connection with this motion. Hon'ble Members of the Legislature as well as responsible bodies in the body politic have for long been asking that a State Finance Corporation may be set up in Mysore State. I must say that all these many years, the Mysore Government virtually has been functioning more or less as a State Finance Corporation. It has been consistently following a very liberal and progressive policy in the matter of aid to industries. I do not want to claim anything more than its due meed of appreciation. But I must say that successive Governments in Mysore have made it a definite policy to do two things: in the first place to sponsor industries which were key industries, as also such industries which were not being taken up by private

enterprise and where capital was shy. That was one of the functions. The other function of the Mysore Government was to go to the rescue of such industries as were not able to stand on their own legs and to help them to tide over the difficulties and then leave the management to the hands of the companies themselves. It was all right so long as these functions were exercised judiciously and carefully. But it is quite natural, Sir, to except that these functions must be conducted in a scientific and rational manner so that the industries which seek the aid of Government must satisfy certain basic conditions and that their financial position must be subject to critical examination and it is only thereafter that they must be given the aid that they seek. And so the present Government held out a promise to the House some time back that they were contemplating to establish a corporation of the kind. I may also say, sir, that there is a third function and that is the question of investments in various concerns. As things are, the Government of Mysore have to depend upon their expert advisers as regards the concern in which they have to take shares and invest their moneys. Even this function had better, the Government consider, be left to a more expert body composed of official experts as well as people who have gathered experience in the various industrial activities in the State. When we were considering this, the House is aware that the Government of India had already set up a Finance Corporation at the Centre. But the operations of that Corporation were not extended to the State. The Central Finance Corporation would only think of aiding big industries which need help up to a maximum of Rs. 50 lakhs. But such of those medium industries as might need less sums, of course, could not expect help from the Central Finance Corporation. Latterly hey have assured us that they would extend their operations to Part B States also so that it is now open for any industry within the State to approach the Central Finance Corporation for help. The question arose as to what should happen to the fate of those medium industries which would require less sums. When we were thinking of establishing our own State Corporation, the Central Government suggested that they would themselves make an enactment for providing for State Finance Corporations in the various States in India and that Bill is now before the Parliament. It is called the State Finance Corporation Bill. The idea there is to provide loans for smaller industries which are outside the scope of Central Corporation and the maximum capital to be invested in that State Finance Corporation is a sum of Rs. two crores. There, twenty-five per cent of the capital, that is, about Rs. 50 lakhs would be found by the public and the rest will be subscribed to by the State Government, the Reserve Bank, the Scheduled Banks Insurance Companies, Investment Trusts, Co-operative Banks, and other similar institutions. But there, of course, the shares will be guaranteed, both repayment of their share capital and reasonable minimum dividend. So, when the Bill becomes an enactment at the Centre we will have a Mysore State Finance Corporation to attend to the needs of all concerns requiring sums up to Rs. 10 lakhs. Even so, there are still certain industries to be left which will require help and which will not be able to get help from either the Central Finance Corporation or from the State Finance Corporation that will now be set up when the State Finance Corporation Bill becomes an enactment shortly For that we have conceived of this State Aid to Industries Bill. This Bill provides for all such cases which cannot receive help from the State Finance Corporation or the Central Finance Corporation. We have got different kinds of loans—loans to educated unemployed, loans to small scale industries which require smaller sums and so on. It is also possible that in some extreme cases we might have to come to the rescue of certain industries which may not fulfil all the tests which the State Finance Corporation might put forward. That is one aspect. The other aspect is, we might be necessitated to invest in

(THE HON'BLE SRI H. C. DASAPPA.)

certain companies to help them. In fact Mysore has set a patt rn in developing State-sponsored industries where the State owns ten pe· cent, thirty per cent or fifty per cent of the shares. In such cases, the Govelnment would require prop r advice. The machinery that we are now going to set up under this Bill will be able to advise Government on all such investments in the various concerns. So I think this is a very necessary thing and a thing which the House has sought for for quite a long time and I am sure it will welcome this piece of legislation.

Mr. SPEAKER.—Motion moved.—

"That the Mysore State Aid to Industries Bill, 1951, be taken into consideration.

There is an amendment.

Sri M. GOVINDA REDDY (Chitaldrug District—General).—Sir, I beg to move:

"That the Mysore State Aid to Industries Bill, 1951, be referred to a Select Committee consisting of the following members:

The Hon'ble Sri H C. Dasappa (Chairman),
Sri A Bheemappa Naik,
Sri H. K. Veeranna Gowda,
Sri Mali Mariyappa, and
The Mover"

Sir, I am in entire agreement with the objects of the Bill and the reasons for which the Bill is brought forward by the Hon'ble Finance Minister. I have gone through the Bill and in addition to the methods of granting subsidies and loans proposed in the Bill, I wish to include the several other means by which the Government are now aiding industries. To point out one instance, under clause 7 it is necessary to include that Government shall have power to give technical and expert assistance free of cost to industries. Government have now been pursuing a benevolent policy of giving aid to industries by these means and by furnishing them with technical assistance free of cost. That, I consider, is a very valuable aid to industries. Industries which have not been able to subsist by these means, industries which have not been able to get technical assistance from outside and pay for that assistance, have been helped by the Government now by sparing their technical assistance to them and at the same time paying salaries for technical assistance. For some time, or until such time as these industries have been able to stand on their own legs, it is very necessary that this power to aid be continued by Government. I do not know the reason why that is not included in this Bill.

The other very important thing which is necessary to be included in this Bill is that as far as cottage industries are concerned, in order to give them encouragement, it is necessary to exempt products of cottage industries from local cesses and octroi. Now, of course, the Government have exempted the products of cottage industries such as khadi and home made woollen goods from octroi duty. This is a very important concession which the Government have been showing to these industries and which has been acting as a very good initiative for these industries to develop production. I wish that this form of concession is continued.

There are other matters also. For instance, the loan given by the Government can be used for purchase of machinery and not for purchase of raw-material. It is very necessary that the industries are helped financially and that they be free to purchase raw-material with the sum advanced as loans. These are several things I could not suggest by means of amendments simply because they involve a question of policy. I do not know why the Government have omitted this. Why the amount should not be used to purchase raw materials may be examined better in a Select Committee. It is for this that I propose that the Bill be referred to the Select Committee.

Since I tabled the amendment, Sir, I have ascertained that Sri H. K. Veeranna Gowda is not willing to serve on the committee for reasons of his own. I therefore beg of you and the House to permit me to alter the amendment to include in place of Sri H K Veeranna Gowda, Sri M. L. Nanjaraja Urs and to include Janab J. Mohamed Imam and Sri G A. Acharya in addition. I pray that this permission to alter the amendment be granted.

Mr. SPEAKER.—Amendment moved:

"That the Mysore State Aid to Industries Bill, 1951, be referred to a Select Committee consisting of the following members:

Sri H. C. Dasappa (Chairman),
Sri A. Bheemappa Naik,
Sri M. L. Nanjaraja Urs,
Sri Mali Mariyappa,
Sri G. A. Acharya,
Janab J. Mohamed Imam, and
The Mover.

The House will now rise for lunch.

The Assembly adjourned for Lunch at Thirty Three Minutes past Three of the Clock and reassembled at Three Minutes past Four of the Clock, Mr. Speaker (The Hon'ble Sri V. Venkatappa) in the Chair).

(Quorum was formed at 4—5 P.M.)

***Mushir-ul-Mulk J. MOHAMED IMAM** (Chitaldrug *cum* Tumkur—Muslim).—I have got not much to say on this Bill. I welcome this measure and I think Government have taken a right step at the right time. The House is aware that industrialists and all those interested in industries are all in need of financial aid. Mysore is known for its industrial enterprise as a pioneer in the industrial field. As was pointed out by the Hon'ble Minister, the previous Governments of Mysore have consistently adopted a policy to foster and develop not only the existing industries but also to give all facilities for those who have started new industries. It is in pursuance of this policy that Mysore has become highly industrialised and that we see various industries throughout the State ranging from the Mysore Iron and Steel Works to the Sugar Company. But for the aid given by the Mysore Government, all these major industries such as the Iron Works, Sugar Company and the Silk Mills and various other industries would not have been in existence. But unfortunately, after a certain time, especially after the war, the conditions have materially changed. The facilities and conveniences which were at the disposal of the industrialists have vanished, the most important being lack of finance. Before the war a good concern that was proposed to be floated would always get the required capital. Any concern with a certain amount of backing from the Government would certainly get the required capital in the market. People had so much confidence in industrial undertaking that they would readily subscribe to the capital. It was in this set-up that all these industries were established and were developed. Even till recently as 1946-47 perhaps Members will remember, when the Amco Factory was established and subscriptions were invited from the public, the capital was oversubscribed; it was 2 to 3 times more than what was called far. But all at once we found to our great disadvantage that the entire attitude and the enthusiasm of the people towards these industries had faded away. People lost confidence in new industries. Very few persons could come forward to establish new industries because if anybody wanted to start a new enterprise and when he approached the public, there was very little response. Regarding the existing industries, there was therefore a distinct setback. In respect of all the industries that were held high in the estimate of the people, their situation and their position became rather, I do not say precarious, difficult now. Many of them lack the necessary finance for future development. All this because the public somehow lost their confidence in these industries. That is why I have been repeatedly urging on the Government and requesting them to take immediate and effective steps not only to help the existing industries but also take suitable measures to establish new industries. I think in pursuance of that, the Government have taken this step to give financial aid to such of the industries as are in need of it. I would have been very glad if the Government themselves had advanced the required sum that was needed by such concerns as are in need of such financial aid. But as it is, it will be difficult for them

(*Mushir-ul-Mulk* J. MOHAMED IMAM.)

to help all those industries. They did help some industries by way of loans and other things. When they helped one or two concerns, naturally many other concerns wanted to take advantage of it and they also requested for similar aid. But the Government perhaps on account of the present financial difficulty could not comply with their request. So many industries, though they are very good industries and though the management is very good, cannot develop and carry on their normal development work because they were very much in need of financial assistance. The Banks also have become very tight fisted. I know many good concerns, with good assets, with good capital behind them have approached Banks. The Mysore Bank has been very rigid and is not as helpful to these concerns as it ought to be.

There are only two or three ways of giving financial assistance to such industries. Either the Government should give required financial assistance of their own accord or the Government should stand guarantee to any Bank to give these factories loans or the Banks themselves should advance the required loans on proper security. At present, the Government are not in a position to give any financial aid for which I am very sorry. Secondly, I think the Government rather hesitates to give the necessary backing and guarantees to these Banks. Most of the Banks will be willing to advance loans provided the Government give guarantee. But the Government do not want to commit themselves. Thirdly, the Banks are overcareful, and even though there are assets to the extent of Rs. 10 laks or Rs. 20 lakhs, they do not want to advance a loan of Rs. 2 lakhs. When they are provided with proper security, why should they not advance money? But even granting that they advance the amount to the extent of Rs. 2 or 3 lakhs, all on a sudden they recall that loan and want the concerns to pay pay back the loan at once. This will be very difficult for them. It will be very good of the Banks if they just consult the convenience of the concerns and adjust themselves provided the money is safe and provided they get a little return by way of interest. When all other ways and means of assistance are denied to these concerns, I think this Bill establishing an Industrial Finance Corporation is very timely and I am sure this will be welcomed by all the industrialists. I am sure the Government after passing this Bill will take vigorous, effective and immediate measures to implement all the provisions so that all these industries, not only State-aided but private industries, whichever industries deserve financial aid, will get ample benefit from the Industrial Finance Corporation. With these remarks, I wholeheartedly support the Bill with a request that the Government should not be satisfied by the mere passing of the measure but must at once take effective and immediate measures to see that whatever help is proposed to be given through this legislation is actually implemented and all those concerns that are in need of financial aid will get it immediately.

Sri G. A. ACHARYA (Bangalore District—General).—I support this Bill for various reasons. If you survey the economic position of the State of Mysore and its people, you will realise that from morning till evening you require so many things and those things are imported from neighbouring parts of the country and from other parts. It is not my intention by this that we should not buy goods from States or anything like that. The idea is that there are enough schemes, enough men, enough material, but only, minus money. That is the picture. After all, it is men, material and money when incorporated together, which produces wealth, which produces economy. I am not touching on that point. The need for financial assistance to-day is greater than in the previous years. Because, an ordinary Mysorean feels that he can do something, but unfortunately he has not the means; he cannot borrow. Individuals do not take risks and collective effort is lacking. If we are not able to get

money, the very idea cannot be put into practical shape. Supposing in my native town—Goribidanur—there are a few people who can manufacture implements. I know the local sahucar or money-lenders or Multani people have no faith in industry at all. It is at that stage and for such people the Government should give aid. They should find out where there is talent and where money is not forthcoming. It is only when Government come forward with such assistance, they would be improving the economic condition of not only the town but the whole State.

I know the sad plight of our own finances to finance bigger industries. The Finance Corporation is going to come to their rescue. The State industries may apply to the Corporation for assistance. There is safety and security for the money proposed to be advanced. Therefore, from all aspects I find that just as you find in Madras and other places, public opinion also is sought for. Because there are people who may say that they have several schemes and that they are going to produce from sand some sort of thing and so on. There is nothing of that kind specially for the Government to be afraid of in the case of small industries because after all, the Government must recognise that just as they find it extremely difficult to borrow money from the Banks or from anywhere else, so also individuals who have got talent find it extremely difficult to get money for their purpose. It cannot be simply talked in a philosophical way that if you have talent money will come through the back door. All that is nonsense. I am sorry I should not use that word. There is no sense in such talk. It is also true that the Government must recognise this fact as Janab Imam has rightly put it. Is it not the duty of the Government and the State to provide sufficient funds ? Where a particular institution has plant and machinery and is capable of producing articles of daily use, which are absolutely required by the agriculturists, by the weavers; if for some reason or other such institution is not to get money from the Banks or from individuals, I must say that the Government must help such institution. They must certainly see in the direction where the products which are produced by that concern increase the economic position of our farmers and weavers.

After all what is it that we want? We want money for purchasing our comforts. How does money come in ? Money has to be produced. Unless we produce there is no money. Money is nothing. By patronising industries, if the Government are able to improve consumer goods production, and if they are selling well in the market, money will come in. When there is no production, there will be no money. This is to facilitate increased production, wherever there is talent, in whatever area. But Government may ask, how are we to know ? That is exactly my point also. I have known instances as Janab Mahomed Imam has also pointed out; we have talent, raw material, but we only lack working capital. It is but right that Janab Imam should certainly expect from the Government fair increase in production. Production must be increased. I do not want public money to be given away. I want small industries to be looked up more favourably. By that I do not mean that they should not give attention to big industries. Our State consists of 9 districts. In all these districts, there are rural development departments. They know where plenty of raw materials are found in these districts. I appeal to the Finance Minister that the very first thing he has got to do is that with the co-operation of the Rural Development Departments, he must find out as to what are the industries that are dying and which need immediate help, where raw materials are available in plenty in the Districts. If the Government take steps and find out what industries could prosper well for which raw materials are found in the State, the Hon'ble Finance Minister would have rendered a great service to the State. After all we want increased production in all the districts. Once the Hon'ble Minister said that the Rural Industries scheme of

(SRI G. A. ACHARYA.)

Sir M. Visvesvaraiya is to demonstrate to the people at large what could be done with the resources that are available locally. Lastly, the resources of our country have got to be improved if we want to better our future. By these acts we must infuse into the minds of the people a spirit towards increased production. With these words, I support the Bill.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಇದು ಬಹಳ ಉಪಯುಕ್ತವಾದ ಮತ್ತು ಬಹಳ ಅಗತ್ಯವಾದ ಮಸೂದೆಯಾಗಿದೆ. ನಮ್ಮ ದೇಶವು ಸ್ವತಂತ್ರವಾದ ಮೇಲೆ, ಸ್ವಾತಂತ್ರ್ಯ ಗಳಿಸಿದ ಮೇಲೆ ನಮ್ಮ ದೇಶವನ್ನು ಸ್ವಾವಲಂಬಿಯಾಗಿ ಮಾಡಬೇಕು, ಹೊರದೇಶದಿಂದ ಬರತಕ್ಕ ಸಾಮಾನುಗಳನ್ನು ಸದಾ ನಮ್ಮ ದೇಶದಲ್ಲೇ ತಯಾರು ಮಾಡಬೇಕು ಎಂಬ ಭಾವನೆ, ದೇಶಭಕ್ತಿ ನಮ್ಮಲ್ಲಿ ಬೇಕಾದಷ್ಟು ಬೆಳೆದಿದೆ. ಅದಕ್ಕೆ ತಕ್ಕಂತೆ ನಮ್ಮಲ್ಲಿ ಯೋಗ್ಯತೆ, ದಕ್ಷತೆ, ಬುದ್ಧಿಕುಶಲತೆ ಇವೆಲ್ಲವೂ ಇವೆ. ಆದರೆ ಈಗ ಬೇಕಾಗಿರುವುದು ಹಣ. ಹಣದ ಮುಗ್ಗಟ್ಟಿನಿಂದ ಉತ್ಸಾಹವಿದ್ದರೂ ಕೂಡ ಅದನ್ನು ಮಿಯೋಗಿಸಿ ತಕ್ಕ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಾಗದೆ ಅನೇಕರು ತೊಂದರೆಪಡುತ್ತಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ಭಾಷ್ಯಂರವರು ಹೊರದೇಶಕ್ಕೆ ಹೋಗಿ ಬಂದಮೇಲೆ ಉಪನ್ಯಾಸಗಳನ್ನು ಆಗಾಗ್ಗೆ ಮಾಡುತ್ತಿದ್ದಾರೆ. Compared to a foreigner an Indian is more intelligent and more industrious ಎಂದು ಆಗಾಗ್ಗೆ ತಿಳಿಸುತ್ತಲೇ ಇದ್ದಾರೆ. ಆದರೆ ಎಲ್ಲರೂ ಸಾಮೂಹಿಕವಾಗಿ ಕೂಡಿ ಕೆಲಸಮಾಡುವುದಕ್ಕೆ ನಮ್ಮ ದೇಶದವರಿಗೆ ಸ್ವಲ್ಪ ಪ್ರೋತ್ಸಾಹ ಬೇಕು. ಅದಕ್ಕಾಗಿ ಈ ಮಸೂದೆಯನ್ನು ತಂದಿರುವುದು ಸ್ವಾಗತಾರ್ಹವಾಗಿದೆ. ಇದು ಬಹಳ ಅಗತ್ಯವಾಗಿದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಈ ಮಸೂದೆಯನ್ನು ಇನ್ನೂ ಸ್ವಲ್ಪ ಉಪಯುಕ್ತವಾಗಿ ಮಾಡಬೇಕಾದರೆ ಕೆಲವು ತಿದ್ದುಪಡಿಗಳನ್ನು ಮಾಡಬೇಕಾದ್ದು ಅತ್ಯಗತ್ಯವಾಗಿದೆ. ನಾನು ಕೆಲವು ತಿದ್ದುಪಡಿಗಳನ್ನು ಸೂಚಿಸಿ ಕಳುಹಿಸಿದ್ದೆ. ಅದರಲ್ಲಿ ಮುಖ್ಯವಾದ ಒಂದು ಕ್ಲಾಜಿದೆ. ಸಮಿತಿಯವರು ಏಕ ಮತದಿಂದ ಒಂದು ನಿರ್ಣಯ ಮಾಡಿ ಒಂದು ಕೈಗಾರಿಕೆಗೆ ಹಣ ಕೊಡಬಾರದೆಂದು ತೀರ್ಮಾನ ಮಾಡಿದರೆ ಸರ್ಕಾರದವರು ಅದಕ್ಕೆ ಒಪ್ಪುತ್ತಾರೆಂಬ ನೂಡನೆಯಿದೆ. ಆದರೆ ಅದಕ್ಕೆ ಒಂದು ಕಾರಾವಧಿಯನ್ನು ಗೊತ್ತುಮಾಡಬೇಕಾದ್ದು ಅತ್ಯಂತ ಅಗತ್ಯವೆಂದು ಕಾಣುತ್ತದೆ. ಒಂದು ಕಾಲದಲ್ಲಿ ಯಾವುದಾದರೂ ಒಂದು ಕೈಗಾರಿಕೆಯು ಕ್ಷೀಣದೆಶೆಯಲ್ಲಿದ್ದಾಗ ಹಣ ಕೇಳಿದ್ದಲ್ಲಿ ಸಮಿತಿಯವರು ಆ ಸಮಯದಲ್ಲಿ ಹಣ ಕೊಡುವುದು ಕಷ್ಟವಾಗಬಹುದು. ಆದರೆ ಸ್ವಲ್ಪ ಕಾಲವಾದ ಮೇಲೆ ಅದೇ ಸಮಿತಿಯವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿ ಯಾರು ಹಣ ಕೇಳಿದ್ದರೋ ಅವರಿಗೆ ಕೊಡಬೇಕೆಂದು ಅಭಿಪ್ರಾಯ ಬರಬಹುದಾಗಿರಬಹುದು. ಅದಕ್ಕೆ ಈ ಮಸೂದೆಯಲ್ಲಿ ಅವಕಾಶವಿಲ್ಲದಂತೆ ಮಾಡಿದ್ದಾರೆ. ಒಂದು ಬಾರಿ ಯಾವುದಾದರೂ ಕೈಗಾರಿಕೆಗೆ ಹಣ ಕೊಡುವುದು ಅನಾವಶ್ಯಕ ಎಂದು ಸಮಿತಿಯವರು ಶಿಫಾರ್ಸು ಮಾಡಿದರೆ ಅದನ್ನು ಸರ್ಕಾರದವರು ಅಂಗೀಕಾರ ಮಾಡಬೇಕೆಂದು ಆರನೆಯ ಪುಟದಲ್ಲಿರುವ ಸಬ್ ಸೆಕ್ಷನ್‌ನಲ್ಲಿ ಸೂಚನೆಯಿದೆ. ಅದು ಜಾರಿಗೆ ಬಂದರೆ ಒಂದು ಕೈಗಾರಿಕೆಗೆ ಹೆಚ್ಚು ಸಾಲ ಕೊಡಬೇಕೆಂದು ಕೇಳುವುದಕ್ಕೆ ಸಹ ಅವಕಾಶವಿರುವುದಿಲ್ಲ. ಹಾಗೆ ಕೇಳುವುದಕ್ಕೆ ಅವಕಾಶ ಮಾಡಬೇಕಾದ್ದು ಅವಶ್ಯಕ. ಇದನ್ನು ಸೆಲೆಕ್ಟ್ ಸಮಿತಿಯವರು ಗಮನಿಸಬೇಕು.

ಎರಡನೆಯದಾಗಿ, ಯಾರ್ಯಾರಿಗೆ ಹಣವನ್ನು ಒದಗಿಸಬೇಕೆಂಬ ಸೂಚನೆ ಮಾಡಿರುವ ವಿಚಾರ. ಮುಖ್ಯವಾಗಿ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮತ್ತು ಸ್ಟೇಟ್ ಫೈನಾನ್ಷಿಯರ್ ಕಾರ್ಪೊರೇಷನ್‌ನಿಂದ ಹಣ ಯಾರಿಗೆ ಒದಗಿಸಬಹುದೋ ಅವರಿಗೆ ಏನಾ ಮಿಕ್ಕವರಿಗೆ ಸಮಿತಿಯು ಕಾನೂನು ಪ್ರಕಾರ ಹಣ ಕೊಡಬೇಕು ಎಂದು ಅವಕಾಶ ಮಾಡುವುದು ಒಳ್ಳೆಯದೆಂದು ತೋರುತ್ತದೆ.

ಮೂರನೆಯದಾಗಿ, ಈ ಸಮಿತಿಯು ಎಷ್ಟು ಕಾಲ ಸದಸ್ಯರ ಬದಲಾವಣೆಯಾಗದೆ ಕೆಲಸ ಮಾಡುತ್ತದೆಂಬುದನ್ನು ಸೂಚಿಸಿಲ್ಲ.

ಇದೇ ರೀತಿಯಾಗಿ ಗೃಹಕೈಗಾರಿಕೆಗಳು ಮುಂತಾದ್ದಕ್ಕೆಲ್ಲಾ ಧನಸಹಾಯ ಮಾಡಲು ಈ ಮಸೂದೆಯಲ್ಲಿ ಅವಕಾಶವಿದೆ. ಇದು ಅಗತ್ಯ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಾವು 21 ನೆಯ ಕ್ಲಾಜನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ವಿ. ಎಸ್. ನಾರಾಯಣರಾಯರು.—ಸಾಮಾನ್ಯವಾಗಿ ನಾನು ಹೇಳಿರುವ ಲೋಪಗಳಿವೆ. ಅದನ್ನು ಕಾನೂನಿನಲ್ಲಿ ಸರಿಪಡಿಸಬಹುದೆಂದು ಕಾಣುತ್ತದೆ.

The Hon'ble Sri H. C. DASAPPA.—Please see 21 (1) and (2):

"The Government may make rules to carry out all or any of the purposes of this Act."

"The term of office of the members of the Board of Industries, the quorum at the Board's meetings, the method of arriving at its decisions, etc, etc,."

ಶ್ರೀ ವಿ. ಎಸ್. ನಾರಾಯಣರಾಯರು.—ಇದರಲ್ಲಿ 'No aid shall be granted under this Act if the Board by a unanimous resolution at a meeting advises the rejection of the application" ಎಂದಿದೆ. ಒಂದು ಸಾರಿ reject ಆದರೆ ಮತ್ತೊಮ್ಮೆ ಒಂದೆರಡು ವರ್ಷದ ಮೇಲಾದರೂ ಪುನಃ ಅರ್ಜಿಹಾಕಿಕೊಳ್ಳಬಹುದೆಂದು ಅವಕಾಶ ಮಾಡಿದರೆ ಒಳ್ಳೆಯದೆಂದು ನನ್ನ ಸೂಚನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ನಾನು ಅನುಮೋದಿಸುತ್ತೇನೆ. ಶ್ರೀಮಾನ್ ನಾರಾಯಣರಾಯರು ಹೇಳಿದಂತೆ, ಇದರಲ್ಲಿ ಬೋರ್ಡಿನವರು ಸರ್ವಾನುಮತದಿಂದ ಸಹಾಯ ಕೊಡಬಾರದೆಂದು ಹೇಳಿದರೆ ಕೊಡಲೇಬಾರದೆಂದಿದೆ. ಬಹುಮತಾಭಿಪ್ರಾಯ (simple majority) ಈ ರೀತಿಯಾದರೂ ಕೂಡ ಕೊಡಕೂಡದೆಂಬ ಅರ್ಥವಾಗುತ್ತದೆ. ಸರ್ವಾನುಮತ ಎಲ್ಲಿಯೂ ಬರುವುದಿಲ್ಲ, ಯಾರಾದರೊಬ್ಬರು ಬೇರೆ ಅಭಿಪ್ರಾಯ ಹೇಳಿದರೂ ಆಗ ಸರ್ವಾನುಮತವಾಗುವುದಿಲ್ಲ. ಅದಕಾರಣ, ಸರ್ವಾನುಮತವಿಲ್ಲದಿದ್ದು ಒಬ್ಬರು ಬೇರೆ ರೀತಿ ಹೇಳಿದರೂ ಕೂಡ ಕೊಡಬಹುದೆಂಬ ಅರ್ಥವಾದರೆ ಸಾಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸರ್ವಾನುಮತದಿಂದ ಕೊಡಬಹುದು ಎಂದು ಹೇಳಿದರೇನೆ ಸರ್ಕಾರದವರು ಕೊಡುವುದಿಲ್ಲ, ಹಾಗೆ ಹೇಳದಿದ್ದ

ಸಂದರ್ಭದಲ್ಲಿಯೂ ಕೊಡಬಹುದು ಅಥವ ಕೊಡದೇಯಿರಬಹುದು. It is open to Government to give or not to give.

ಶ್ರೀ ಎಸ್. ರಂಗರಾಮಯ್ಯನವರು.—ಈ ಹೊತ್ತು ಸರ್ವಾನುಮತದಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೂ ಆ ಮೇರೆ ಸರಿಯಾದಕಾರಣ ಕಂಡುಬಂದರೆ ಪುನಃ ಪರಿಶೀಲಿಸಲು ಅವಕಾಶವಿಲ್ಲ. ಇದನ್ನೂ ಸರಿಪಡಿಸಬೇಕು.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಬೆಲ್ಲೆ).—ಮಾನ್ಯ ಅಧ್ಯಕ್ಷರೆ, ಈ ಮಸೂದೆಯನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮೈಸೂರು ಪ್ರಶದಲ್ಲಿ ಕೈಗಾರಿಕೆಗಳಿಗೆ ಹಣವನ್ನೊದಗಿಸತಕ್ಕ ಯಾವ ಬ್ಯಾಂಕುಗಳೂ ಕೂಡ ಕೈಗಾರಿಕಾಭಿವೃದ್ಧಿಗಾಗಿ ಹಣವನ್ನು ಕೊಡುವುದು ಸಾಧ್ಯವಿಲ್ಲದ ರೀತಿಯಲ್ಲಿ ರಿಜರ್ವ್ ಬ್ಯಾಂಕು ಹೊಸ ಕಾನೂನು ಮಾಡಿ ಬ್ಯಾಂಕುಗಳ ಕೈಕಟ್ಟಿರುವ ಈ ಸಮಯದಲ್ಲಿ ಈ ಮಸೂದೆ ಬಂದಿರುವುದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಮಾನ್ಯ ಶ್ರೀಮಾಡಿ ದಾಸಪ್ಪನವರೇ ಕೈಗಾರಿಕೆ ಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳು. ಎರಡು ಶಾಖೆಗಳಿಗೂ ಒಬ್ಬರೇ ಮಂತ್ರಿಗಳಾಗಿರುವುದರಿಂದ ಈ ಮಸೂದೆಯನ್ನು ತರಲು ಸಾಧ್ಯವಾಯಿತೆಂದು ನನ್ನ ಭಾವನೆ. ಈ ಎರಡಕ್ಕೂ ಬೇರೆ ಬೇರೆಯ ಮಂತ್ರಿಗಳಿದ್ದಿದ್ದರೆ, ಕೈಗಾರಿಕೆ ಮಂತ್ರಿಗಳು ಈ ಪ್ರಯತ್ನ ಮಾಡಿದ್ದರೆ ಆರ್ಥಿಕ ಮಂತ್ರಿಗಳು, ಕೈಗಾರಿಕೆಗಳಿಗೆ ಸಾಲ ಕೊಟ್ಟರ ಅಭಿವೃದ್ಧಿಗ ಬರುವುದಿಲ್ಲ, ಹಣ ವಾಪಸು ಬರುವುದಿಲ್ಲ, ಇದು ಬೇಡವೆಂದು ಹೇಳಿಬಿಟ್ಟಿದ್ದರೂ ಆಗುತ್ತಿರಲಿಲ್ಲ. ಈ ತೊಂದರೆ ತಪ್ಪಿಸುವುದಕ್ಕೆ ಒಂದು ಸಮಿತಿಯನ್ನು ಮಾಡಿ ಮೊದಲೇ ಆ ಸಮಿತಿಯವರು ಆಲೋಚನೆ ಮಾಡಿ ನಲಹೆ ಮಾಡಿದ ಮೇರೆ ಹಣ ಸಾಲಕೊಟ್ಟರೆ ವಾಪಸು ಬರುತ್ತದೆಂಬ ಯೋಚನೆಯಿಂದ ಇದನ್ನು ತಂದಿದ್ದಾರೆಂದು ನನಗನ್ನಿಸುತ್ತದೆ.

ಕೆಲವು ದಿನಗಳ ಹಿಂದೆ ನಂಜನಗೂಡಿನಲ್ಲಿ ಕೋಆಪರೇಟಿವ್ ಸಮಿನಾರ್ ನೇರಿದಾಗ, ನಾನು ಒಂದು ಗೃಹ ಕೈಗಾರಿಕೆಗಳಿಗಾಗಿ ಒಂದು ಸಮಿತಿ ಮಾಡಿ ಈ ಸಣ್ಣ ಕೈಗಾರಿಕೆಗಳನ್ನು ಬೆಳೆಸಿ ಅಭಿವೃದ್ಧಿ ಮಾಡಬೇಕೆಂದು ಯೋಚನೆ ಅವರ ಮುಂದಿಟ್ಟಾಗ, ಹಣ ಸಹಾಯವಿಲ್ಲದಿದ್ದರೆ ಸಣ್ಣ ಕೈಗಾರಿಕೆಗಳು ಬೆಳೆಯಲು ಸಾಧ್ಯವಿಲ್ಲವೆಂಬ ಅಭಿಪ್ರಾಯ ಬಂದಿತ್. ಆದ್ದರಿಂದ ಸಣ್ಣಕೈಗಾರಿಕೆಗಳನ್ನು ಕಷ್ಟದಿಂದ ಪಾರುಗಾಣಿಸಲು ಇಂತಹ ಒಂದು ಸಹಾಯ ಮಾಡುವ ಸಮಿತಿಯನ್ನು ಮಾಡಿ ಕೈಗಾರಿಕೆಗಳನ್ನು ಬೆಳೆಸುವ ಯೋಚನೆ ಮಾಡಿದ್ದು ಬಹಳ ಒಳ್ಳೆಯದು ಮತ್ತು ಇದಕ್ಕೆ ಸಕಾಲವಾಗಿದೆ ಎಂದು ಹೇಳಲಿಚ್ಛಿಸುತ್ತೇನೆ. ಯಾವ ದೇಶದಲ್ಲೇ ಆಗಲಿ ಆ ದೇಶದ ಕೈಗಾರಿಕೆ ಬೆಳವಣಿಗೆಗಾಗಿ ಬೇರೆ ವಿಧದಲ್ಲಿ ಎಷ್ಟೇ ಅನುಕೂಲಗಳನ್ನು ಕಲ್ಪಿಸಿದರೂ ಆ ಅನುಕೂಲಗಳ ಜೊತೆಗೆ ಧನ ಸಹಾಯವನ್ನೊದಗಿಸಲು ಅವಕಾಶವಿಲ್ಲದಿದ್ದರೆ, ಕೈಗಾರಿಕೆಗಳು ಎಷ್ಟು ಜಾಗ್ರತೆ ಬೆಳೆಯಬೇಕೋ ಅಷ್ಟು ಜಾಗ್ರತೆ ಬೆಳೆಯಲು ಸಾಧ್ಯವಾಗುವುದಿಲ್ಲ. ಇಂಡಿಯಾ ಸರ್ಕಾರದವರು ಒಂದು ಲಕ್ಷದಿಂದ ಹತ್ತು ಲಕ್ಷ ರೂಪಾಯಿವರೆಗೆ ಸಹಾಯ ಮಾಡಲು ಏರ್ಪಾಡು ಮಾಡುತ್ತಾರೆ. ಹತ್ತು ಲಕ್ಷದ ಮೇರೆ ಮಾತ್ರ ದೊಡ್ಡ ಕೈಗಾರಿಕೆಗಳಿಗೆ ಸಹಾಯ ಮಾಡಿದರೆ ಸಾಕೆಂದು ನಮ್ಮನೆ ಕುಳಿತಿದ್ದರೆ ಸಣ್ಣ ಕೈಗಾರಿಕೆಗಳು ಬೆಳೆಯಲು ಅವಕಾಶವಾಗುತ್ತಿರಲಿಲ್ಲ. ಇದೆಲ್ಲವನ್ನೂ ಯೋಚನೆ ಮಾಡಿ ಈ ಎರಡು ಕಾರ್ಪೊರೇಷನ್ ಗಳಾಗುವ ಸಂದರ್ಭದಲ್ಲಿ ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸಹಾಯವನ್ನೊದಗಿಸುವುದಕ್ಕಾಗಿ ಈ ಮಸೂದೆಯನ್ನು ತಂದಿರುವುದು ಸೂಕ್ತವಾಗಿದೆ ಮತ್ತು ಸಮಯೋಚಿತವಾಗಿದೆ. ಕೆಲವು ಬ್ಯಾಂಕುಗಳಲ್ಲಿಯೂ ಸಂಸ್ಥೆಗಳಲ್ಲಿಯೂ produce loans ಎಂದು ಸಾಮಾನುಗಳನ್ನು ಒತ್ತೆ ಇಟ್ಟುಕೊಂಡು ಹಣವನ್ನು ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಸಣ್ಣ ಕೈಗಾರಿಕೆಗಳು ಇಂತಹ ಯಾವ ಸಂಸ್ಥೆಗಳಿಂದಲೂ ಸಹಾಯ ಪಡೆಯುವುದಕ್ಕಾಗುವುದಿಲ್ಲ. ಈ ಮುಗ್ಗಟ್ಟಿನ ಸಮಯದಲ್ಲಿ ಅನೇಕ ಬ್ಯಾಂಕುಗಳವರು ಭೂಮಿ ಮತ್ತು ಮನೆಗಳ ಮೇರೆ ಸಾಲ ಕೊಡುವುದನ್ನು ನಿಲ್ಲಿಸಿದ್ದಾರೆ. ಜಾಮೀನಿನ ಮೇರೆ ಕೊಡುವುದನ್ನು ಬಹಳ ಕಡಿಮೆ ಮಾಡಿದ್ದಾರೆ. ಹೀಗಾಗಿ ಕೈಗಾರಿಕೆಗಳಿಗೆ ಯಾವ ಸಹಾಯವೂ ಇಲ್ಲದ್ದೇಯಿರುವ ಪರಿಸ್ಥಿತಿ ಬಂದು ಯಾವ ಕೈಗಾರಿಕೆಯನ್ನೂ ಅಭಿವೃದ್ಧಿ ಸ್ಥಿತಿಗೆ ತರುವುದಕ್ಕೆ ಅವಕಾಶವಿಲ್ಲದ ಹಾಗಾಗಿದೆ. ಸರ್ಕಾರದವರು ವಿದ್ಯಾವಂತ ನಿರುದ್ಯೋಗಿಗಳ ಸಹಾಯಕ್ಕೆಂದು ಸಮಿತಿ ಮಾಡಿದ್ದಾರೆ. ಅದು ಪ್ರಾರಂಭವಾದಾಗಿನಿಂದ ನಾನು ನೋಡುತ್ತಿದ್ದೇನೆ: ಎಷ್ಟೋ ಜನರಿಗೆ ಸಾಲ ಕೊಡುವುದಾಗಿದೆ. ಆದರೆ ಕೊಟ್ಟ ಸಾಲ ವಾಪಸು ಬರುತ್ತಿಲ್ಲ. ಇದು ನಮ್ಮ ದುರದೃಷ್ಟ! ಕಾರಣ ಇಷ್ಟೆ: ಸಾಲ ವಾಗಲ್ಯ, ಗ್ರ್ಯಾಂಟಾಗಲ್ಯ ಸರ್ಕಾರದಿಂದ ತೆಗೆದುಕೊಂಡ ಆ ಹಣ ತಮ್ಮದೇ ಎಂಬ ಭಾವನೆ ಜನರಲ್ಲಿ ಬಂದಿದೆ. ಇದು ತಪ್ಪಬೇಕಾದರ ಒಂದು ಬ್ಯಾಂಕು ಅಥವ ಕಾರ್ಪೊರೇಷನ್ ಇದ್ದು ಇದು ತನ್ನ ಕಾರ್ಯರಂಗವನ್ನು ಹೆಚ್ಚಿಸಿಕೊಂಡು ಹೋಗಿ ಆಗಾಗ ಒತ್ತಾಯ ಮಾಡುತ್ತಿದ್ದರೆ, ಸರ್ಕಾರದವರು ಕೊಟ್ಟ ಹಣವನ್ನು ವಸೂಲು ಮಾಡಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಸಣ್ಣ ಕೈಗಾರಿಕೆಗಳಿಗೆ ಈ ರೀತಿಯ ಸಂಸ್ಥೆ ಅತ್ಯಗತ್ಯವಾಗಿದೆ.

ಎರಡನೆಯದಾಗಿ, ಸರ್ಕಾರದವರು ಈಗ ಅನೇಕ ಕೈಗಾರಿಕೆಗಳಿಗೆ ಎಷ್ಟೋ ಸಾಲವನ್ನು ಕೊಡುತ್ತಿದ್ದಾರೆ. ಪ್ರತಿಯೊಂದು ಇರಾಖೆಯೂ ಬೇರೆ ಬೇರೆ ಕೊಡುತ್ತಿರುವುದರಿಂದ ಜನರಿಗೆ ಕಾಣುತ್ತಿಲ್ಲ. ಏಕೆಂದರೆ ಒಂದು ಕಡೆ consolidate ಆಗುತ್ತಿಲ್ಲ. ಒಬ್ಬನೇ ಮನುಷ್ಯ ಹತ್ತು ಕಡೆ ಸಾಲವನ್ನು ತೆಗೆದುಕೊಳ್ಳಬಹುದು. ಒಂದು ಇರಾಖೆಯಲ್ಲಿ ತೆಗೆದುಕೊಂಡದ್ದು ಇನ್ನೊಂದು ಇರಾಖೆಗೆ ಗೊತ್ತಾಗುವುದಿಲ್ಲ. ಇಂತಹ ದೋಷಗಳು ಈ ಮಸೂದೆಯಿಂದ ಮಾಡುವ ಏರ್ಪಾಡಿನಿಂದ ತಪ್ಪಿ ಕೈಗಾರಿಕೆಗಳನ್ನು ಬೆಳೆಸುವುದಕ್ಕೂ ಅನುಕೂಲವಾಗುತ್ತದೆ, ಅವು ಬೆಳೆಯುವುದಕ್ಕೂ ಅನುಕೂಲವಾಗುತ್ತದೆ. ಅಲ್ಲದೆ ಅನೇಕ ಸಂದರ್ಭಗಳಲ್ಲಿ ಒಂದು ಕೈಗಾರಿಕೆಗೆ ಎಲ್ಲಿ ಅನುಕೂಲತೆಗಳಿರುತ್ತವೆಯೋ ಅಲ್ಲಿ ಸ್ಥಾಪನೆ ಮಾಡುವುದು ಬಿಟ್ಟು ಎಲ್ಲಿ ಅನುಕೂಲ ಇಲ್ಲವೋ ಅಲ್ಲಿ ಮಾಡುತ್ತಾರೆ. ಅಲ್ಲವೆ ಒಂದೊಂದು ಕಡೆಗೆ ಹೆಚ್ಚಿನ ಅನುಕೂಲ ಸಿಕ್ಕಿ ಇನ್ನೊಂದು ಕಡೆ ಸಿಕ್ಕುವುದೇ ಇಲ್ಲ. ಆದರೆ ಇಂತಹ ಒಂದು ಸಂಸ್ಥೆ ಇದ್ದರೆ ಎಲ್ಲೆಲ್ಲಿ ಅನುಕೂಲಕೊಟ್ಟಿದೆ, ದೇಶದಲ್ಲಿ ಯಾವ ಯಾವ ಕೈಗಾರಿಕೆಗೆ ಅವಕಾಶವಿದೆ, ಎಷ್ಟೆಷ್ಟು ವ್ಯಾಪ್ತಿ ಇದೆ, ಅದರಲ್ಲಿ ತಯಾರಾಗುವುದು ಎಷ್ಟು ವ್ಯಾಪಾರವಾಗುತ್ತದೆ, ಎಂಬುದನ್ನೆಲ್ಲಾ ನೋಡಿಕೊಂಡು ಸರಿಯಾಗಿ ಯೋಚಿಸಿಕೊಳಿಸಲು ಅವಕಾಶವಾಗುತ್ತದೆ. ಹಾಗಿಲ್ಲದೆ ಒಂದು ಕೈಗಾರಿಕೆಗೆ ಸಾಕಷ್ಟು ವ್ಯಾಪ್ತಿ ಇಲ್ಲದಿದ್ದರೂ ಕೂಡ ಅಲ್ಲಿ ಅಣಬೆಗಳು ಬೆಳೆದ ಹಾಗೆ ಬೆಳೆದರೆ, ಹಾಗೆಯೇ ಹೊರಟು ಹೋಗುತ್ತದೆ. ಹೀಗಾಗದೆ ಒಂದು ರೀತಿನೀತಿ ಇಟ್ಟುಕೊಂಡು ಕೈಗಾರಿಕೆಗಳನ್ನು

(ಶ್ರೀ ಎ. ಭೀಮಪ್ಪನಾಯಕರು.)

ಬೆಳೆಸಲು ಸಾಧಕವಾಗಲು ಒಂದು ಸಂಸ್ಥೆಯಿದ್ದರೆ ಅನುಕೂಲ. ಜರ್ಮನಿ ಮುಂತಾದ ದೇಶಗಳಲ್ಲಿ ಗೃಹ ಕೈಗಾರಿಕೆ ಅಷ್ಟೊಂದು ಬೆಳ್ಳುತ್ತಿದ್ದಲ್ಲಿ ಬೆಳೆಯುವುದಕ್ಕೆ ಇಂತಹ ಸಂಸ್ಥೆಗಳು ಬಹಳ ಸಹಾಯ ಮಾಡಿವೆ ಎಂಬುದು ಎಲ್ಲರ ಗಮನದಲ್ಲಿಯೂ ಇರುವ ವಿಷಯ. ಕೋ-ಆಪರೇಟಿವ್ ಸೆಮಿನಾರ್‌ನಲ್ಲಿ ಮಾಡಿದ ಸಲಹೆಯ ಮೇರೆ Central Industrial Bank ಏರ್ಪಾಡು ಮಾಡಿದರು, ಕೋಆಪರೇಟಿವ್ / ಇನ್‌ಸ್ಟಿಟ್ಯೂಟ್ ಮಾಡಿದರು. ಇವು ಪರಸ್ಪರ ಸಹಾಯವಾದರೆ ಯಾವ ಕೈಗಾರಿಕೆಗೆ ಸಾಲ ಕೊಡುತ್ತಾರೋ ಆ ಕೈಗಾರಿಕೆಯಿಂದ ತಯಾರಾಗುವ ಸಾಮಾನುಗಳನ್ನು ಮಾರಾಟ ಮಾಡಲೂ, ಬೇರೆ ದೇಶಗಳಿಗೆ ಕಳುಹಿಸಿ ಮಾರಾಟ ಮಾಡಲೂ ಅನುಕೂಲವಾಗುತ್ತದೆ. ಇದನ್ನು ಕೂಡ ಸರಿಕ್ಟ್ ಕಮಿಟಿಯವರು ಯೋಚನೆ ಮಾಡಬಹುದು. ಸಂಸ್ಥೆಯವರು ಯಾರಿಗೆ ಸಾಲಕೊಡುತ್ತಾರೋ ಅಂಥ ವರು ತಯಾರಿಸುವ ಮಾಲುಗಳು ಸರಿಯಾಗಿ ಮಾರಾಟಕ್ಕೆ ಹೋಗಿ, ಸರಿಯಾದ ಬೆಲೆ ಬರುವುದಕ್ಕೆ ಕೂಡ ಸಹಾಯವಾಗಬೇಕು. ಇದನ್ನು ಪರಿಶೀಲಿಸುವುದು ಅತ್ಯಗತ್ಯ. ಇದರ ವ್ಯಾಪ್ತಿಯನ್ನು ಇನ್ನೂ ಹೆಚ್ಚಿಸಬೇಕು; ಒಂದೇ ಕಡೆ ಇಂತಹ ಸಂಸ್ಥೆ ಇರುವುದಕ್ಕೆ ಬದಲು ಪ್ರತಿಹಳ್ಳಿಯಲ್ಲಿಯೂ ಕೂಡ ಇದರ ಕೆಲಸ ಕಾರ್ಯ ನಡೆಯುವುದಕ್ಕೆ ಅವಕಾಶ ಕಲ್ಪಿಸಬೇಕು. ಏಕೆಂದರೆ, ಮೈಸೂರು ದೇಶದ ಎಲ್ಲ ಭಾಗಗಳಲ್ಲಿಯೂ ಕೈಗಾರಿಕೆಗಳು ಹರಡಬೇಕು. ಒಂದೇ ಕಡೆ ಎಲ್ಲವೂ ಇದ್ದರೆ ಅದರಿಂದ ಪ್ರಯೋಜನವಾಗುವುದು ಕಷ್ಟವಾಗುತ್ತದೆ. ಅಲ್ಲದೆ ಮೈಸೂರು ಸರ್ಕಾರದವರು ಒಂದು ಸಾಲವನ್ನಾಗಲೀ ಗ್ರಾಂಟನ್ನಾಗಲೀ ಮಂಜೂರು ಮಾಡಿದರೆ ಅದನ್ನು ಪಡೆಯಬೇಕಾದರೆ ಆರು ತಿಂಗಳು, ಒಂದು ವರ್ಷ ಹೀಗೆಲ್ಲಾ ತಡವಾಗುತ್ತದೆ. ಮುಂದಿನ ವರ್ಷದ ಗ್ರಾಂಟು ಮಂಜೂರಾಗಿದ್ದರೂ ಹಿಂದಿನ ವರ್ಷದ ಗ್ರಾಂಟು ಕೈಗೆ ಸಿಕ್ಕುವುದಿಲ್ಲ. ಇಷ್ಟು ತಡವಾಗುತ್ತದೆ. ಒಂದು ಕಾರ್ಪೊರೇಷನ್ ಇದ್ದರೆ ಈ 'ರೆಡ್ ಟೇಪಿಸಮ್' ತೊಲಗುತ್ತದೆಂದು ನನ್ನ ಭಾವನೆ. ಈ ಏರ್ಪಾಡನ್ನು ಶ್ರೀಮಾನ್ ದಾನಪ್ಪನವರು ಕೈಗಾರಿಕೆ ಮತ್ತು ಹಣಕಾಸಿನ ಮಂತ್ರಿಗಳಾಗಿ ಮಾಡಿರುತ್ತಾರೆ. ಇದರಿಂದ ಮೈಸೂರು ದೇಶದ ಆರ್ಥಿಕ ಮತ್ತು ಕೈಗಾರಿಕಾ ಬೆಳೆವಣಿಗೆ ಅಭಿವೃದ್ಧಿಯಾಗಿ ಒಳ್ಳೆಯ ಪರಿಣಾಮವಾಗುತ್ತದೆಂದು ಭಾವಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ಮಸೂದೆ ಬಹಳ ಚೆನ್ನಾಗಿದೆ. ಆದರೂ ಇದರಲ್ಲಿರತಕ್ಕ ಕೆಲವು ರೋಪಗಳನ್ನು ನಾನು ಹೇಳಬೇಕೆಂದಿದ್ದೇನೆ. ಈಗ ಈ ಕಾರ್ಪೊರೇಷನ್‌ನಿಂದ ಕೈಗಾರಿಕೆಗೆ ಎಷ್ಟೋ ಉಪಯೋಗವಾಗುತ್ತದೆ ಎಂದು ಹೇಳಿದ್ದಾರೆ. ಆ ರೀತಿ ಉಪಯೋಗವಾಗುತ್ತದೆಯೇ ಎಂತಲೂ ಯೋಚನೆ ಮಾಡಬೇಕಾಗಿದೆ. ಈ ಕಾನೂನು ಮಾಡುವುದೆಲ್ಲಾ ಜನಗಳ ಅನುಕೂಲಕ್ಕೇ ಎಂದು ಹೇಳುವುದಾದರೆ, ನಿಜವಾಗಿಯೂ ಅವರಿಂದ ಯಾರಿಗೆ ಅನುಕೂಲವಾಗಬೇಕೋ ಅವರಿಗೆ ಆಗುತ್ತಾ ಇಲ್ಲ. ಉದಾಹರಣೆಗೆ ಮೈಸೂರು ಬ್ಯಾಂಕು ಜನರಲ್ ಮ್ಯಾನೇಜರು ಒಬ್ಬ ಸ್ವಾಮ್ಯಟ್ಯುಟರಿ ಡೈರೆಕ್ಟರ್ ಆಗಿದ್ದಾರೆ. ಇದು ನ್ಯಾಯ. ಏಕೆಂದರೆ ಮೈಸೂರು ಬ್ಯಾಂಕು. ದೇಶದಲ್ಲಿ ಬಹಳ ಪ್ರಾಮುಖ್ಯವಾದ ಬ್ಯಾಂಕು ಮೈಸೂರು ಸರ್ಕಾರದ ಸರ್ವ ಸೌಲಭ್ಯಗಳನ್ನೂ ಅದು ಹೊಂದಿದೆ. ಎಷ್ಟೋ ಜನಗಳಿಂದ ಉಪಕಾರ ಹೊಂದಿ ದೊಡ್ಡದಾಗಿ ಬೆಳೆದಿದೆ. ಇದನ್ನೂ ಸರ್ಕಾರದವರು ಬಹಳ ಕಷ್ಟ ಪಟ್ಟು ಆಗಿನ ಕಾಲದಲ್ಲಿ ಸ್ಥಾಪನೆ ಮಾಡಿದರು. ಸರ್ಕಾರದ ಪ್ರೋತ್ಸಾಹ ಕೊಟ್ಟರು. ನಮ್ಮ ದೇಶದ ಜನಗಳೂ ಸಹ ಅದರ ಷೇರುಗಳನ್ನೂ ತೆಗೆದುಕೊಂಡಿದ್ದರು. ಅದೆಲ್ಲಾ ಇವತ್ತು ಯಾರ ಕೈಯಲ್ಲೋ ಇವೆ.

ಅಧ್ಯಕ್ಷರು.—ಈಗ ಮೈಸೂರು ಬ್ಯಾಂಕ್ ವಿಷಯ ಏಕೆ?

ಶ್ರೀ ಬಿ. ಹುಚ್ಚೇಗೌಡರು.—ಮೈಸೂರು ಬ್ಯಾಂಕಿನ ಮ್ಯಾನೇಜರು ಇದರಲ್ಲಿ ಡೈರೆಕ್ಟರ್ ಆಗಿರುತ್ತಾರೆ.

ಅಧ್ಯಕ್ಷರು.—ಆದರೆ, ಮೈಸೂರು ಬ್ಯಾಂಕಿನ ವಿಷಯ ಎಲ್ಲಾ ಚರ್ಚೆ ಮಾಡುವುದಕ್ಕಾಗುತ್ತದೆಯೇ!

Sri G. A. ACHARYA.—The Bank is not before us, but various industrial schemes.

ಶ್ರೀ ಬಿ. ಹುಚ್ಚೇಗೌಡರು.—ಈಗ ತಾವು ಇಂಡಸ್ಟ್ರಿಯಲ್ ಬ್ಯಾಂಕನ್ನು ಬೆಂಗಳೂರಿನಲ್ಲಿ ಇಡುತ್ತೀರಿ. ಆದರೆ ಆದರ ಫಲ ದೇಶದ ಮೂಲೆಗೆ ಮುಟ್ಟಬೇಕಾದರೆ ಒಂದು ಏರ್ಪಾಡು ಮಾಡಬೇಕು. ಅದಕ್ಕೆ ಯಾವ ತರಹ ಏರ್ಪಾಡು ಮಾಡುತ್ತೀರಿ. ಇದರಿಂದ ಬೆಂಗಳೂರಿಗೆ ಹೆಚ್ಚಾಗಿ ಓಡಾಡುವವರಿಗೆ ಅನುಕೂಲವೇ ಏನಾಗಿ ಬೇರೆಯವರಿಗಲ್ಲ. ನಶಿಸಿಹೋಗಿರುವ ಕೈಗಾರಿಕೆಗೆ ಏನಾದರೂ ಸಹಾಯ ಸಿಗಬೇಕೆಂದರೆ ಅವರು ದೇಶದ ಮೂರೆ ಮೂಲೆಗಳಿಂದ ಎಷ್ಟು ಸಾರಿ ಬೆಂಗಳೂರಿಗೆ ಓಡಾಡ ಬೇಕು. ಆದ್ದರಿಂದ ಇದನ್ನೆಲ್ಲಾ ನೋಡಿಕೊಳ್ಳುವುದಕ್ಕೆ ಒಂದು ಏರ್ಪಾಡು ಇರಬೇಕು. ಈ ತರಹ ಸೌಲಭ್ಯ ಕಲ್ಪಿಸಿ ಸಾಲ ಕೊಟ್ಟರೆ ಅದನ್ನು ವಸೂಲು ಮಾಡುವುದಕ್ಕೆ ರಹ ಬೇಕು. ಸಾಲ ಕೊಟ್ಟವರಿಗೂ, ತೆಗೆದುಕೊಂಡವರಿಗೂ ಸಂಬಂಧ ಬಹಳ ದೂರ ಇದ್ದರೆ ಸಾಲ ವಸೂಲಾಗುವುದಿಲ್ಲ. ಇವತ್ತಿನ ದಿನ ಮೈಸೂರು ಬ್ಯಾಂಕು ಇಷ್ಟು ಸಾರ್ವಕಾರ್ಯ ಹೊಂದಿ, ಅಭಿವೃದ್ಧಿಗೆ ಬಂದು ದೇಶದ ಹಿತಕ್ಕೆ ವ್ಯತಿರಿಕ್ತವಾಗಿ ವ್ಯವಹಾರ ನಡೆಸುತ್ತ ಇದೆ. ಈಗ ಏನು ಆಗಿದೆ ಎಂದರೆ ಸೆಕ್ಷನ್ (6) 2 (b) ಪ್ರಕಾರ ಯಾರೇ ಆಗಲೀ ಇಂಡಿಯಾ ದೇಶದವರಾಗಿದ್ದರೆ ಸಾಕು ಎಂದು ಹೇಳಿದ್ದಾರೆ. ಹೊರಗಿನವರಿಗೆ ಎಷ್ಟು ಸೌಲಭ್ಯ ಸಿಕ್ಕುತ್ತದೆಯೋ ಅಷ್ಟು ಸೌಲಭ್ಯ ಸ್ಥಳದವರಿಗೆ ಈಗ ಸಿಕ್ಕುತ್ತಿಲ್ಲ. ಒಬ್ಬ ಹೊರಗಿನಿಂದ ಇವತ್ತು ಒಂದು ತಂಬಿಗೆ ಹಿಡಿದುಕೊಂಡು ಬರುತ್ತಾನೆ. ಅವನಿಗೆ ಬೇಕಾದಷ್ಟು ಸೌಲಭ್ಯ ಸಿಕ್ಕುತ್ತದೆ. ಅವರಿಗೆ ಸಿಕ್ಕತಕ್ಕ ಸೌಕರ್ಯ ಸ್ಥಳದವರಿಗೆ ಸಿಕ್ಕುವುದಿಲ್ಲ. ಆದ್ದರಿಂದ ಬ್ಯಾಂಕಿನ ಏರ್ಪಾಡು ಬೇಕೇ ಬೇಕು. ಹಾಗೆ ಮಾಡುವುದಾದರೆ ಆಯಾಯಾ ಸ್ಥಳದವರಿಗೆ ಅನುಕೂಲವಾಗುತ್ತದೆಯೇ ಹೊರತು ಬೆಂಗಳೂರಿನಲ್ಲಿಟ್ಟುಕೊಂಡು ಹಣ ಕೊಡುವುದಾದರೆ ಸಾಧ್ಯವಾಗುವುದಿಲ್ಲ. ಕಾರ್ಪೊರೇಷನ್ ಆಯಿತು ಎಂದು ಲೆಕ್ಕಕ್ಕೆ ಆಗುತ್ತದೆಯೇ ಹೊರತು ಜನಗಳಿಗೆ ಎಳ್ಳಷ್ಟೂ ಉಪಕಾರವಾಗುವುದಿಲ್ಲ. ಯಾರು ಮುಂದೆ ನುಗ್ಗಿ ಪ್ರಯತ್ನ ಪಡುತ್ತಾರೋ ಅವರಿಗೆ ಸಿಕ್ಕುತ್ತದೆ. ಬಾಕಿಯವರಿಗೆ ಇಲ್ಲದ ಹಾಗೆ ಆಗುತ್ತದೆ. ಅದಕ್ಕೋಸ್ಕರ ಮೈಸೂರು ಬ್ಯಾಂಕಿನ ಉದಾಹರಣೆ ಹೇಳಿದೆ ಅಷ್ಟೆ. ಮೈಸೂರು ಬ್ಯಾಂಕು ಇವತ್ತಿನ ದಿನ ಸರ್ಕಾರದ ಯಾವುದಾದರೂ ಒಂದು ಕೇಳಿಕೆಗೆ ಆಷ್ಟಾಗಿ ಬೆರೆ ಕೊಡುತ್ತಿಲ್ಲ. ಅವರು ಕಳುಹಿಸಿದ ಪ್ರಾರ್ಥನೆಗಳನ್ನೂ ನಿರಾಕರಿಸುತ್ತಿದ್ದಾರೆ. ಆದ್ದರಿಂದ ಒಂದು ಬ್ಯಾಂಕಿನ ಸರಿಯಾದ ವ್ಯವಸ್ಥೆ ಆಗಬೇಕು. ಸೌಲಭ್ಯ ಒದಗಿಸಬೇಕು. ಇಲ್ಲದೇ ಇದ್ದರೆ ಮೈಸೂರು ಬ್ಯಾಂಕಿನವರೇ ಎಲ್ಲಾ ಕಡೆಯೂ ಹೆಚ್ಚಾಗಿ ಏರ್ಪಾಸಿಗಳನ್ನು ತೆರೆದು ಆ ಮೂಲಕವಾದರೂ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಮತ್ತು ಹಿಂದುಳಿದ ಕೈಗಾರಿಗೆ

ಗಳಿಗೆ ಅನುಕೂಲವಾಗುವಂತೆ ಮಾಡಬೇಕಾದ್ದು ಅತ್ಯಾವಶ್ಯಕ. ಏಕೆಂದರೆ ಎಷ್ಟೋ ಕೈಗಾರಿಕೆಗಳನ್ನು ಜನರು ಕಷ್ಟಪಟ್ಟು ಪ್ರಾರಂಭಮಾಡುತ್ತಾರೆ. ಅವು ರಾಭ ದಾಯಕವಾದವುಗಳಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕೊನೆಯಲ್ಲಿ ಒಳ್ಳೆಯ ಅನುಕೂಲಸ್ಥಿತಿಗೆ ಬಂದಾಗ ಕೈಬಿಟ್ಟು ಹೋಗುತ್ತವೆ. ಉದಾಹರಣೆಗೆ ನಮ್ಮ ಸಿನಿಮಾ ಲೆಗೆದುಕೊಳ್ಳಿ : ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ಅದನ್ನು ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಕೈಯಲ್ಲಿ ಕಾಸಿಲ್ಲದೆ ಬೇರೆಯವರಿಗೆ ಕೊಟ್ಟುಬಿಟ್ಟರು. ಅದನ್ನು ಕೊಂಡು ಕೊಂಡವನಿಗೆ ಲಕ್ಷಾಂತರ ರೂಪಾಯಿ ಸಿಕ್ಕುತ್ತಿದೆ. ಕಷ್ಟ ಪಟ್ಟವನಿಗೆ ಏನೂ ಇಲ್ಲ. ಶಕ್ತಿಮೀರಿ ಒಂದು ಒಳ್ಳೆಯ ಉದ್ಯೋಗಕ್ಕೆ ಕೈಹಾಕುತ್ತಾರೆ; ಇದ್ದ! ಬದ್ದ ದುಡ್ಡು ಖರ್ಚು ಮಾಡುತ್ತಾರೆ. ಪ್ರತಿ ಫಲ ಬರುವ ಕಾಲಕ್ಕೆ ದುಡ್ಡು ಇಲ್ಲದೇ ಹೋಗುತ್ತದೆ. ಅಂಥ ಸಮಯದಲ್ಲಿ ಸರ್ಕಾರದವರು ಸಹಾಯಕ್ಕೆ ಬರುವುದಿಲ್ಲ. ಅದನ್ನು ಮತ್ತೊಬ್ಬರಿಗೆ ಮಾರುತ್ತಾರೆ ನಮ್ಮಲ್ಲಿ ನೂರಾರು ಸಣ್ಣ ಪುಟ್ಟ ಕೈಗಾರಿಕೆಗಳಿವೆ, ಅವರಿಗೆ ಇವರ ಸಹಾಯ ಅತ್ಯವಶ್ಯಕವಾಗಿ ಬೇಕಾಗಿದೆ .....

Sri K. R. MADHAVA RAO (Shimoga District-General).—The Hon'ble Member is mistaking for some other Bill which is under contemplation by the Parliament. This Bill does not envisage the constitution of banks but only envisages the appointment of a board of officials and non-officials to grant loan to such of the industries as desire to have it.

Sri B. HUTCHE GOWDA.—I am just suggesting on what lines it should work.

The Hon'ble Sri H. C DASAPPA.—I have been unable to follow his reasons.

ಶ್ರೀ ಬಿ. ಹುಚ್ಚೇಗೌಡರು.—ಆದ್ದರಿಂದ ಸಾಧ್ಯವಾದ ಮಟ್ಟಿಗೂ ಈ ಉದ್ಯಮದಿಂದ ಸ್ವಳದವರಿಗೆ ಹೆಚ್ಚು ಪ್ರೋತ್ಸಾಹಕಾರಿಯಾಗುವಂತೆ ಏರ್ಪಾಡುಮಾಡಬೇಕೆಂಬುದೇ ನನ್ನ ಮುಖ್ಯ ಉದ್ದೇಶ. ಈ ಅಂಶವನ್ನು ನಾನು ಸಭೆಯ ಮುಂದೆ ಇಟ್ಟಿದ್ದೇನೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯೇನೋ ನೋಡುವುದಕ್ಕೆ ಚೆನ್ನಾಗಿ ಕಾಣುತ್ತದೆ; ದೇಶದಲ್ಲಿ ಅದು ಸರಿಯಾಗಿ ಉಪಯೋಗಕ್ಕೆ ಬಂದರೇನೋ ಒಳ್ಳೆಯದೇ. ಆದರೆ ನಮ್ಮ ದೇಶದಲ್ಲಿ ಈ ವಿಚಾರದಲ್ಲಿ ಹಿಂದಿನ ಅನುಭವ ಏನು, ಅದು ಹೇಗೆ ನಡೆದಿದೆಯೆಂಬುದನ್ನು ನೋಡೋಣ. ಈಗ ಸ್ವಲ್ಪ ಹಿಂದೆ ಮಾನ್ಯ ಮಂತ್ರಿಗಳು ತಿಳಿಸಿದಂತೆ ಅಗ್ರಿಕಲ್ಚರಲ್ ಲೋನ್‌ಗಳು, ಇಂಡಸ್ಟ್ರಿಯಲ್ ಲೋನ್‌ಗಳು ಇವೆಲ್ಲಾ—ನಮ್ಮ ದೇಶದಲ್ಲಿ ಮೊದಲಿನಿಂದಲೂ ಜಾರಿಯಲ್ಲಿವೆ. ಈ ವಿಚಾರದಲ್ಲಿ ಇಂಡಿಯಾ ದೇಶದಲ್ಲೆಲ್ಲಾ ನಮ್ಮ ದೇಶ ಮೊದಲಿನಿಂದಲೂ ಮುಂದಿದೆ. ಆದರೆ ಎಷ್ಟು ಕಷ್ಟ ಹೀಗೆಲ್ಲಾ ಹಣ ಕೊಟ್ಟು ಅವರೆಲ್ಲಾ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಹಣವನ್ನೆಲ್ಲಾ ಆಯೋಗ್ಯ ರೀತಿಯಲ್ಲಿ ತಿಂದು ಹಾಕಿ, ಕೊನೆಗೆ ಅವರಿಂದ ಹಣ ವಸೂಲಿಗೆ ಯಾವ ರಹವೂ ಇಲ್ಲದೆ write off ಮಾಡಬೇಕಾಗಿ ಬಂದ ಸಂದರ್ಭಗಳಿವೆಯೆಂಬುದನ್ನು ನೀವು ಸ್ವಲ್ಪ ನೋಡಿ. ಏಕೆಂದರೆ ಅಂಥಾ ಒಂದು ಸ್ಟಾಟಿಸ್ಟಿಕ್ಸ್ ಇಟ್ಟುಕೊಂಡರೆ ನಮಗೆ ಮುಂದೆ ಇಂಥ ಬಿಲ್ಲಿನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಗೊತ್ತಾಗುತ್ತದೆ. ಅಂಥ ಯಾವ ಅಂಕ ಅಂಶಗಳೇನಾದರೂ ಶೇಖರಿಸಿದ್ದರೆ ತಾವು ಉತ್ತರ ಕೊಡುವಾಗ ಹೇಳಿ. ಒಟ್ಟಿನಲ್ಲಿ ಹೇಳುವುದಾದರೆ ಕೈಗಾರಿಕೆಗಳ ಬೆಳವಣಿಗೆಗೆ ದುಡ್ಡನ್ನೇನೋ ಒದಗಿಸಬೇಕೆಂಬುದನ್ನು ಒಪ್ಪುತ್ತೇನೆ. ಆದರೆ ಹಿಂದಿನಿಂದಲೂ ನಮ್ಮ ಮೈಸೂರಿಗರ ಮನೋಭಾವ, ಕಾರ್ಯಸಾಧನೆ ಯಾವ ರೀತಿಯದೆಯೆಂಬುದನ್ನು ನೋಡಿಕೊಂಡು ಕೊಡಿ. ಏಕೆಂದರೆ ಹಿಂದಿನಿಂದಲೂ ಇದಕ್ಕಾಗಿ ಬೇಕಾದಷ್ಟು ಹಣ ಹಾಕಿದಿರಿ. ಕೇಳಿ ಕೇಳಿದ ವೈಜ್ಞಾನಿಕ ಸಲಹೆ ಸಹಾಯಗಳನ್ನು ಒದಗಿಸಿದಿರಿ. ಇಷ್ಟಾದರೂ ಮೈಸೂರಿಗರಾಗಿ ಇಂದು ಸ್ವಂತ ಬಂಡವಾಳ ಹಾಕಿಕೊಂಡು ಎಷ್ಟು ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ ಹೇಳಲಿ. ಮಾತಿಗೇನೋ ಬೇಕಾದಷ್ಟಿವೆಯೆನ್ನಬಹುದು. ನಿಜವಾಗಿ ಉನ್ನತಿಯ ಸ್ಥಿತಿಯಲ್ಲಿರುವುದು ಎಷ್ಟಿವೆ! ನಾವು ಕಣ್ಣಾರೆ ನೋಡುತ್ತಿರುವಂತೆ ಹೊರಗಿನವರೇಕರು ನಮ್ಮ ದೇಶಕ್ಕೆ ಬಂದು ಎಷ್ಟೋ ಕೈಗಾರಿಕೆಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತಿದ್ದಾರೆ. ನಮ್ಮವರು ಯಾವುದೂ ಹಾಗೆ ಮಾಡಿಲ್ಲ. ಯಾವ ಫ್ಯಾಕ್ಟರಿ ಪ್ರಾರಂಭ ಮಾಡಿದರೂ ಕೂಡ ಅದು ಸರಿಯಾಗಿ ಕೊನೆಗೆ ಪದಾರ್ಥಗಳನ್ನು ತಯಾರಿಸುವ ಮಟ್ಟಕ್ಕೆ ಬಂದು ನಮ್ಮವರ ಕೈಯಲ್ಲೇ ಉಳಿದಿರುವುದು ಅಪರೂಪ. ಮೊದಲನೆಯಲ್ಲೇನೋ ನಾವು ಹಣ ಕೊಡುತ್ತೇವೆಂದು ಎಷ್ಟೋ ಜನರು ಮುಂದೆ ಬಂದು ಪ್ರಾರಂಭ ಮಾಡುತ್ತಾರೆ. ಕೊನೆಗೆ ಯಾವುದೂ ಉಳಿಯುವಂತೆ ಕಾಣುವುದಿಲ್ಲ. ಇದುವರೆಗಿನ ಈ ಚರಿತ್ರೆಗಳನ್ನೆಲ್ಲಾ ನೋಡಿದರೆ ನಮ್ಮ ಜನರಿಗೇಕೋ ವ್ಯಾಪಾರದ ಮನೋಧರ್ಮ, ವ್ಯಾಪಾರ ಸ್ವಭಾವ ಇರುವ ಚಿಹ್ನೆಯೇ ಕಾಣುವುದಿಲ್ಲ. ಸರ್. ಎಂ. ವಿಶ್ವೇಶ್ವರಯ್ಯನವರು ಅವರ ಕಾಲದಲ್ಲೇ ನಮ್ಮ ಜನರು ಒಂದು ಹೋಟಲನ್ನಾದರೂ ಸರಿಯಾಗಿ ನಡೆಸುವುದನ್ನು ಕಲಿತು ಕೊಳ್ಳಲೆಂದು ಪರದೇಶಗಳಿಗೆ ಕೆಲವರನ್ನು ಕಳುಹಿಸಿಕೊಟ್ಟರು. ಒಂದು ದೂರದೃಷ್ಟಿಯಿಂದ ಇದನ್ನು ಮಾಡಿದರು. ಇದೂ ಕೂಡ ಸಫಲವಾಗಲಿಲ್ಲ. ಅಡಿಗೆ ಮಾಡಿ ಊಟ ಬಡಿಸುವುದೆಂಬುದು ಎಲ್ಲರಿಗೂ ತಿಳಿದಿರುವುದಾದರೂ, ಇಂಥಾದ್ದಕ್ಕೂ ಸರಿಯಾಗಿ ಕೆಲಸಗಾರರನ್ನು ಹೊಂದಿಸಿಕೊಂಡು ಹೇಗಾದರೂ ಬಂಡವಾಳ ಸಂಪಾದಿಸಿಕೊಂಡು ಚೆನ್ನಾಗಿ ಹೋಟಲು ನಡೆಸಲಕ್ಕೂ ನಮ್ಮವರಿಗೆ ಬರಲಿಲ್ಲ. ಈಗ ಹೊರಗಿನವರು ಎಷ್ಟು ಲಾಭದಾಯಕವಾಗಿ ಹೋಟಲುಗಳನ್ನು ನಡೆಸುತ್ತಿದ್ದಾರೆ ನೋಡಿ. ಆದ್ದರಿಂದ ನಾವು ನುಮ್ಮನೆ ಈ ಮನೋಧರ್ಮವನ್ನು ಮಾಡಿದ್ದರಿಂದಲೇ ನಮ್ಮ ದೇಶದಲ್ಲಿ ಕೈಗಾರಿಕೆಗಳು ಬೆಳೆಯುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಹಿಂದೆ ಎಷ್ಟೋ ಮಟ್ಟಿಗೆ ಸಾಲಗಳನ್ನು ಯೋಗ್ಯತೆಯಿಲ್ಲದವರೆಲ್ಲಾ ತೆಗೆದುಕೊಂಡು ಕೊನೆಗೆ ಕೈಗಾದರೆಂಬುದನ್ನು ಸಾರ್ವಜನಿಕರೂ ಮತ್ತು ಸರ್ಕಾರದವರೂ ಮನಗಾಣಬೇಕು. ಆಗ ಬ್ರಿಟಿಷ್ ಇಂಡಿಯಾದಲ್ಲಿ ನೋಡುವುದಾದರೆ ಅಲ್ಲಿ ಇಂಥಾ ಏನೂ ಹೆಚ್ಚಿನ ಸಹಾಯವಿಲ್ಲದೆ ಆ ಜನರು ಕೈಗಾರಿಕೆಗಳನ್ನು ಹೇಗೆ ನಡೆಸುತ್ತಾರೆ ನೋಡಿ. ಆದ್ದರಿಂದ ಸರ್ಕಾರದವರಿಗೆ ಈ ಸಂದರ್ಭದಲ್ಲಿ ಒಂದು ಮುನ್ನೆಚ್ಚರಿಕೆ ಕೊಡಬೇಕೆಂದಿದ್ದೇನೆ. ನಮ್ಮ ಜನರಲ್ಲಿ ಸಾಮಾನ್ಯವಾಗಿ ಒಂದು ಪದ್ಧತಿ ಬಂದು ಬಿಟ್ಟಿದೆ ಏನೆಂದರೆ. ಹೀಗೆ ಎಲ್ಲಾದರೂ ಹಣ ಸಿಕ್ಕುತ್ತದೆಂದರೆ ಸಾಕು, 'ಸಂತೆ ಕೂಡುವುದಕ್ಕೆ ಮುಂಚೆ ಗಂಟುಕಳ್ಳರು ಸೇರಿಕೊಂಡರು' ಎಂದು ಗಾದೆ ಹೇಳುವಂತೆ ಸಾಲಕ್ಕೆ ಎಲ್ಲರೂ ಮುಂದೆ ಬರುತ್ತಾರೆ. ಸಾಲವನ್ನು ತೆಗೆದುಕೊಂಡ ತಕ್ಷಣ, ಕೊಟ್ಟದ್ದನ್ನು ವಾಪಸು ಕೊಡುವುದನ್ನು ತಪ್ಪಿಸಿಕೊಳ್ಳು

(ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪ ಗೌಡರು.)

ವುದು ಹೇಗೆಂಬದನ್ನೇ ಯೋಚನೆ ಮಾಡುತ್ತಿರುತ್ತಾರೆ. ಅಂಥವರೇ ನಮ್ಮಲ್ಲಿ ಜಾಸ್ತಿ. ಕೆಲಸವನ್ನು ರೂಢಿಸಿಕೊಂಡು ಸರಿಯಾಗಿ ನಡೆಸಿಕೊಂಡು ಹೋಗಬೇಕೆಂಬ ವ್ಯಾಪಾರದ ಮನೋಧರ್ಮವೇ (business mentality) ಇಲ್ಲ. ಉದಾಹರಣೆಗೆ ನಮ್ಮ ಆರ್ಥಿಕ ನಿಪುಣರು ಹೇಳಿದ ಬೆಂಕಿಕಡ್ಡಿ ಕಾರ್ಖಾನೆಯನ್ನು ತೆಗೆದುಕೊಳ್ಳಿ. ಅಲ್ಲಿನ ಯಂತ್ರಗಳೆಲ್ಲಾ ಹಳೆಯದಾಗಿ ಹೋಗಿದ್ದುದರಿಂದ ಅದನ್ನು ಮುಚ್ಚಬೇಕಾಯಿತೆಂದು ಹೇಳಿದರು, ಅವರು ಹೇಳುವಂತೆ ಹಳೆಯದೇನೋ ಇರಬಹುದು. ಆದರೂ ಇಂಥಾ ಗಿರಾಕಿಯಿರುವ ಕಾಲದಲ್ಲಿ ಅದರಲ್ಲೂ ನಮ್ಮ ಮೈಸೂರು ದೇಶದಲ್ಲಿ ಇಷ್ಟೊಂದು ಕಾಡು ಪ್ರದೇಶಗಳನ್ನಿಟ್ಟುಕೊಂಡು ಇಷ್ಟು ದಿವಸಗಳೂ ನಡೆಸುತ್ತಿದ್ದುದನ್ನು ಒಳ್ಳೆಯ ಹಣಬರುವ ಕಾಲದಲ್ಲಿ ಮುಚ್ಚುವುದೇ !! ಆದ್ದರಿಂದ ಒಟ್ಟನಲ್ಲಿ ನಾನು ಹೇಳುವುದೇನೆಂದರೆ, ನೀವು ಬರೀ ಹಣ ಸಹಾಯ ಮಾಡಿದ್ದರಿಂದ ನಿಮ್ಮ ಉದ್ದೇಶ ನೆರವೇರುವುದಿಲ್ಲ. ನಮ್ಮ ಜನರಲ್ಲಿ ಅಂಥ ವ್ಯಾಪಾರದ ಲಕ್ಷಣಗಳು ಬೆಳೆಯುವಂತೆ ಮಾಡಬೇಕು. ಜಾಯಿಂಟ್ ಸ್ಟಾಕ್ ಕಂಪೆನಿಯೇ ಆಗಲಿ, ಕೋ-ಆಪರೇಟಿವ್ ಸೊಸೈಟಿಯೇ ಆಗಲಿ ನಾಲ್ಕಾರು ಜನ ಡೈರೆಕ್ಟರುಗಳು ಸೇರಿಕೊಂಡು ತಮ್ಮ ತಮ್ಮ ಸಂಬಂಧೀಕರಿಗೇ ಸಹಾಯ ಮಾಡಿ ಸಂಸ್ಥೆಯನ್ನೇ ಹಾಳು ಮಾಡಿರತಕ್ಕ ಎಷಾದಕರವಾದ ಉದಾಹರಣೆಗಳು ದೇಶಾದ್ಯಂತವೂ ಇವೆ. ನಾವೇನೂ ಇವನ್ನು ಮುಚ್ಚಿಕೊಳ್ಳಬೇಕಾಗಿಲ್ಲ. ಸರ್ಕಾರದವರೂ ಇವುಗಳನ್ನು ಪ್ರೋತ್ಸಾಹಿಸಬೇಕು. ಕೈಗಾರಿಕಾ ಕಾರ್ಪೊರೇಷನ್ ಬಂದಿದೆಯೆಂದು ಎಲ್ಲರೂ ದುಡ್ಡಿಗೆ ಬರಬಹುದು. ಸರ್ಕಾರದವರು ಮಾತ್ರ ಪ್ರತಿಯೊಂದನ್ನೂ ಕೂಲಂಕಷವಾಗಿ ತನಿಖೆ ಮಾಡಿ ಅವರ ಕೈಗಾರಿಕೆ ಮುಂದೆ ಅಭಿವೃದ್ಧಿಗೆ ಬರುತ್ತದೆಯೇ, ಅವರಲ್ಲಿ ವ್ಯಾಪಾರದ ಲಕ್ಷಣಗಳಿವೆಯೇ, ಮುಂದೆ ಬಂಡವಾಳ ಸಂಪಾದಿಸಿಕೊಂಡು ಅದನ್ನು ನಡೆಸುವ ಚೈತನ್ಯ ಅವರಲ್ಲಿದೆಯೇ ಮುಂತಾದವನ್ನೆಲ್ಲವನ್ನೂ ನೋಡಿಕೊಡಬೇಕು. ಹಾಗಿಲ್ಲದೆ ನಮ್ಮನೆಯೋಗ್ಯತೆಯಿಲ್ಲದಿರುವವರಿಗೆ ಹಣ ಕೊಟ್ಟದ್ದರಿಂದೇನು ಪ್ರಯೋಜನ ? ಹೊರಗಿನಿಂದ ನಮ್ಮ ದೇಶಕ್ಕೆ ಬರತಕ್ಕ ಸಿಂಧಿ ಮುಂತಾದವರುಗಳನ್ನು ನೋಡಿ. ಮತ್ತೆ ಅವರಿಗೇನೂ ನಾವು ಸಹಾಯ ಮಾಡತ್ತಿಲ್ಲ. ಹೊರಗಿನಿಂದ ಬಂದವರಾದರೂ ಅಪರೆಷ್ಟು ನಗಣ್ಯಮುಖದಿಂದ ಇಲ್ಲಿ ಏನಾದರೂ ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡು ಚೆನ್ನಾಗಿ ಕೆಲಸ ನಡೆಯಿಸಿಕೊಂಡು ಹೋಗುತ್ತಾರೆ!! ನಮ್ಮವರೇನಾದರೂ ಹಾಗೆ ಹೊರಗಡೆ ಹೋಗಿದ್ದರೆ ತಲೆಯ ಮೇಲೆ ಕೈ ಹೊತ್ತುಕೊಂಡು ಕಳಿತುಬಿಡುತ್ತಿದ್ದರು. ಆದ್ದರಿಂದ ಅಂಥ ವ್ಯಾಪಾರದ ಲಕ್ಷಣಗಳು ನಮ್ಮ ಜನರಲ್ಲಿ ಉತ್ಪನ್ನವಾಗುವಂತೆ ಏನಾದರೂ ಮಾಡಬೇಕು. ಅದೇನು ನಮ್ಮಲ್ಲೇ ನಮಗೆ ಭರವಸೆಯಿಲ್ಲದೋ ಅಥವಾ ಸಾಕಾದಷ್ಟು ತಿಳಿವಳಿಕೆಯಿಲ್ಲದೆ ಕೆಲಸಕ್ಕೆ ಹೋಗುತ್ತೀವೋ ಗೊತ್ತಿಲ್ಲ.

ಆದ್ದರಿಂದ ಈ ಆಕ್ಟಿನ ವಿಷಯದಲ್ಲಿ ತಾವು ಬಹಳ ಹುಷಾರಿನಿಂದ ಕೆಲಸಮಾಡಬೇಕಾಗಿದೆ. ಆಕ್ಟ್‌ನೋನೋ ಚೆನ್ನಾಗಿದೆ. ಸೆರೆಕ್ಟ್ ಸಮಿತಿಯಲ್ಲೂ ಕಷ್ಟವಿಲ್ಲದೆ ಪಾಸಾಗಬಹುದು. ಆದರೂ look at the broad results !! ಹಿಂದಿನ ಅನುಭವವನ್ನು ನೋಡಿಕೊಳ್ಳಿ. ಹಿಂದೆಲ್ಲಾ ಇದೇ ಉದ್ದೇಶದಿಂದ ಕೆಲಸಮಾಡಿ ಕಲಾಯು ಮಾಡುವವರಿಗೆ, ತಿದಿಗಳನ್ನು ಕೊಟ್ಟರು. ಇನ್ನೂ ಇತರ ಅನೇಕ ಸಣ್ಣಪುಟ್ಟ ಕೈಗಾರಿಕೆಗಳಿಗೂ ಸಹಾಯ ಮಾಡುವ ಪ್ರಯತ್ನವನ್ನು ಸರ್. ಎಂ. ವಿಶ್ವೇಶ್ವರಯ್ಯನವರೇ ಆದಿಯಾಗಿ ಎಲ್ಲರೂ ಮಾಡಿದರು; but with what result !!

ನನಗೆ ಇನ್ನೂ ಒಂದು ಮನಸ್ಸಿನಲ್ಲಿ ಏನು ಅನ್ನಿಸುತ್ತಿದೆಯೆಂದರೆ ಅನೇಕರು ಈ ವಿಧವಾದ ಮಸೂದೆಗಳಿಗೆ ತಮ್ಮ ಅಭಿಪ್ರಾಯವನ್ನು ನೀಡುವಾಗ ತಿನ್ನೋ ಎಲ್ಲರೂ ಇದನ್ನು ಸ್ವಾಗತಿಸುತ್ತಿದ್ದಾರೆ, ಆದುದರಿಂದ ನಾನೂ ಇದನ್ನು ಸ್ವಾಗತಿಸಬೇಕು ಎಂಬ ಭಾವನೆಯಿಂದ ವರ್ತಿಸುತ್ತಿದ್ದಾರೆ. ಆದರೆ ಅಂಥಾ ಮನೋಭಾವದಿಂದ ಕೊಡಲ್ಪಟ್ಟಂಥ ಬೆಂಬಲದಿಂದೆಂದಿಗೂ ದೇಶದಲ್ಲಿನ ಜನರಿಗೆ ಈ ಕೈಗಾರಿಕೆಯಲ್ಲಿ ಪ್ರೋತ್ಸಾಹ ಅಥವಾ ಉತ್ತೇಜನವನ್ನು ನೀಡಿದಂತಾಗುವುದಿಲ್ಲ. ಅಂಥ ಬೆಂಬಲದಿಂದ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವುದಕ್ಕೂ ಆಗುವುದಿಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರು ಈ ಕೈಗಾರಿಕೆಗಳ ಬಗ್ಗೆ ಈಗಾಗಲೇ ಒಂದು ಯೋಜನೆಯನ್ನೇ ತಯಾರುಮಾಡಿದ್ದಾರೆ. ಆ ಬಗ್ಗೆ ಕೆಲವು ಕೈಗಾರಿಕೆಗಳು ಈಗ ಚಾಲ್ತಿಯಲ್ಲಿ ಕೆಲಸ ನಡೆಸುತ್ತಿವೆ. ಆದರೆ ಅಂಥಾ ಯೋಜನೆಗಳೆಲ್ಲಾ ಜಾಗ್ರತೆ ಇನ್ನೂ ಅಭಿವೃದ್ಧಿಗೆ ಬರಬೇಕೆಂಬುದೇ ನನ್ನ ಆಶಯ. ಆದರೆ ಇಂಥಾ ಕೈಗಾರಿಕೆಗಳೆಲ್ಲಾ ಕೇವಲ ದುಡ್ಡಿನ ತೊಂದರೆ ಅಥವ ಅಭಾವ ಒಂದರಿಂದಲೇ ಅಭಿವೃದ್ಧಿ ಹೊಂದದಂತಾಗಿವೆಯೆಂದು ಹೇಳಿದರೆ ನಾನು ಆ ವಾದವನ್ನು ಒಪ್ಪತಕ್ಕವನಲ್ಲ. ಹತ್ತಾರು ಜನರು ಸೇರಿಕೊಂಡು ನಾವು ಇಂಥಾ ಒಂದು ಕೈಗಾರಿಕೆ ಪ್ರಾರಂಭಿಸುತ್ತೇವೆ, ನಮಗೆ ಅದಕ್ಕಾಗಿ ಇಷ್ಟು ದುಡ್ಡು ಬೇಕಾಗಿದೆಯೆಂದು ಅವರು ಯಾರನ್ನಾದರೂ ಹಣದ ಸಹಾಯ ಕೋರಿದರೆ ಒಬ್ಬನಲ್ಲ ಇನ್ನೊಬ್ಬ ಹಣವನ್ನು ಕೊಚ್ಚೇಕೊಡುತ್ತಾನೆ. ಶೇಕಡ 6 ರಂತೆ ಬಡ್ಡಿ ಕೊಡತಕ್ಕ ಕಡೆ ನಾವು ಶೇಕಡ 7 ರಂತೆ ಬಡ್ಡಿ ಕೊಡುತ್ತೇವೆಂದು ಹೇಳಿದರೆ ದುಡ್ಡು ಆಗ ತಾನೇತಾನಾಗಿ ಹೊರಗೆ ಬರುತ್ತದೆ. ಆದರೆ ಈ ವಿಚಾರದಲ್ಲಿ ನಾನು ಇಷ್ಟೆಲ್ಲಾ ಹೇಳಿದಾಗ್ಯೂ ನೀವು ಮಾತ್ರ ಸಾಲ ಕೊಡುವಾಗ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕಾಗಿದೆ. ನೀವು ನಿಮ್ಮ ಹುಷಾರಿನ ಮೇಲೆ ಇರತಕ್ಕದ್ದು ಬಹಳ ಅತ್ಯಗತ್ಯ. ಮೊನ್ನೆ ಕೂಡ ನಾನು ಶ್ರೀವಿ ವಿಹಾರಾಜರವರು ಅಪ್ಪಣೆ ಕೊಡಿಸಿದ್ದ ಭಾಷಣದ ಸಂದರ್ಭದಲ್ಲಿ ಮಾತನಾಡುವಾಗ ಈ ಕೈಗಾರಿಕೆಗಳ ಬಗ್ಗೆ ತಮ್ಮ ರೀತಿ ನೀತಿ ಹೀಗಿರಬೇಕೆಂಬ ವಿಚಾರದಲ್ಲಿ ಬಹಳವಾಗಿ ಪ್ರಸ್ತಾಪ ಮಾಡಿದ್ದೇನೆ. ದೇಶದ ಮತ್ತು ಜನರ ಪರಿಸ್ಥಿತಿ ನೋಡಿ ನೀವು ಕೆಲಸ ಮಾಡಬೇಕು. ಅಲ್ಲದೆ ಈ ಸಂಬಂಧವಾಗಿ ಈ ಕೆಲಸ ಕಾರ್ಯಗಳು ಸುಗಮವಾಗಿ ನಡೆದುಕೊಂಡು ಹೋಗುವಂತೆ ವಿಶೇಷವಾದ ಮಾಡಲು ನೀವು ಒಂದು ಸಮಿತಿಯನ್ನಾದರೂ ಅಗತ್ಯವಾಗಿ ಮಾಡಲೇಬೇಕಾದೀತೆಂದೂ ಆಗಲೇ ನಾನು ತಿಳಿಸಿನ್ನೇನೆ. ಹಾಗೆ ತಮ್ಮ ತತ್ವದಲ್ಲಿ ಇದನ್ನು ಸೇರಿಸಿ ಕೆಲಸ ಮಾಡುವವರಿಸಿ. ಆದರೆ ಹಾಗೆ ಜನಗಳನ್ನು ಸೇರಿಸಿ ಒಂದು ಸಮಿತಿಯನ್ನು ಮಾಡತಕ್ಕ ಕಾಲದಲ್ಲಿ, ಇವರು ನನ್ನವರು, ಇವರು ತನ್ನವರು, ಇವರು ನನ್ನ ಪಾರ್ಟಿಗೆ ಸೇರಿರತಕ್ಕವರು, ಇವರು ನಮ್ಮ ಪಕ್ಕದ ಮನೆಯವರು ಎಂಬ ಮುಲಾಜಿಗೆ ಮನ ಕೊಡತಕ್ಕಂಥವರನ್ನು ಮಾತ್ರ ಅದರಲ್ಲಿ ಸೇರಿಸಬೇಡಿ. ಏತಕ್ಕೆಂದರೆ ದುಡ್ಡು ಕೈಗೆ ಬೀಳುವ ತನಕ ಅವರು ಬಹಳ ಹಸನ್ಮುಖಿಗಳಾಗಿ ತಮ್ಮ ಬಳಿಗೆ ಬರುತ್ತಿರುತ್ತಾರೆ ಶಿವಾಯ ಹಾಗೆ ಒಂದಾವರ್ತಿ ದುಡ್ಡು ಅವರ ಕೈಗೆ ಬಿದ್ದಕೂಡಲೇ ಅವರು ಪುನಹ ಅವರ ಮುಖವನ್ನು ಸಹ ತಮಗೆ ತೋರಿಸದೇ ಇದ್ದಂಥಾ ಸಂದರ್ಭಗಳು

ಒದಗಬಹುದು. ಏತಕ್ಕೆಂದರೆ ಹಿಂದೆರ್ಾ ಆ ರೀತಿ ನಡೆದಿರುವ ಘಟನೆಗಳು ನನ್ನ ಜ್ಞಾಪಕದಲ್ಲಿವೆ. ಆದುದರಿಂದ ನೀವು ಇಂಥಾ ಅಂಶಗಳನ್ನೆರ್ಾ ಬಹಳ ದೀರ್ಘವಾಗಿ ಆಲೋಚನೆ ಮಾಡಿ ನೋಡಬೇಕಾಗಿದೆ. ನಿಜವಾಗಿ ಯಾರು ದುಡಿಯಲೇ ಬೇಕೆಂಬ ಉದ್ದೇಶದಿಂದ, ಸತ್ಯನಂಧರಾಗಿದ್ದುಕೊಂಡು, ಚೆನ್ನಾಗಿ ಕೆಲಸನಡೆಸುವ ದಕ್ಷತೆಯುಳ್ಳವರಾಗಿ, ಸರಿಯಾದ ಸೆಕ್ಯೂರಿಟಿ ಕೊಡತಕ್ಕಂಥವರಾಗಿದ್ದರೆ ಅಂಥವರಿಗೆ ತಾವು ಸಾಲ ಕೊಡಶಕ್ಕದ್ದು ಉತ್ತಮವಾದ ರೀತಿ ಎಂದು ತಿಳಿಸುತ್ತೇನೆ. ಅಂದರೆ ನೀವು ಎಲ್ಲಾನಂದರ್ಭಗಳಲ್ಲೂ ಉದಾರಿಗಳಾಗೇ ವರ್ತಿಸಬೇಕೆಂಬುದು ನನ್ನ ಭಾವನೆಯಲ್ಲ. ತಾವು ಸಾಲ ಕೊಡುವಾಗ ನಿರ್ದಾಕ್ಷಿಣ್ಯವಾಗಿ ಅರ್ಹರಾದವರಿಗೇ ಕೊಡಬೇಕೆಂದು ಸಲಹೆ ಮಾಡಿ ನಾನೂ ಕೂಡ ಈ ಮಾನೂದೆಗೆ ಬೆಂಬಲ ನೀಡುತ್ತೇನೆ.

* **Janab MOHAMED HANIEF** (Bangalore—Muslim).—Mr. Speaker, the heading itself of the Bill is 'A Bill to regulate State Aid to Industries'. It means that the industries must be existant, that State aid is being given to some of the industries and that now you want to regulate the type of aid that you propose to give. It postulates a careful analysis, an examination of the status of those industries; these are matters to which attention will certainly be paid before any aid is given to any industry. Therefore, I do not understand any proposition put forward to say 'Make the people industrially minded. Then give them aid.' It is only to the industrially minded people that aid is contemplated to be given, not to any person who is not competent to undertake any industry. Therefore, to the extent people are industrially minded, to that extent, increased aid will certainly be forthcoming in a regulated form from the Government. In this country of ours, no industry is undertaken without some sort of aid. It may be the aid from a Marwari or a Multani or a Bank to some person who has got or who is actuated by a profit motive. The giver also has a profit motive. Because he is a private person, that profit motive becomes rather too much emphasised. But when the State comes to the aid of the industries, probably the profit making motive is at a minimum. Of course, there are other dangers to which my Hon'ble friend Sri Gundappa Gowda referred. Preference may be given as a result of some consi'erations other than those of the industry deserving some aid. We are human. You cannot eliminate such, shall I say, leanings. But that does not mean that you should not give aid to industries. My feeling in the matter is that there should be a maximum attempt to aid as many industries as possible in the State wherever they exist because unless and until such aid is forthcoming, those industries stand the danger of being nipped in the bud. We are becoming industrially minded. I for one would say that cottage industry ought to be encouraged in all its forms in our State. For, that would avoid concentration of people in towns. It would also encourage people to live in their villages and make a living for themselves and also make the life of those around them happy and prosperous. Japan is an instance in point. Cottage industry there, it would appear, was given very great encouragement with the result that production became cheap and the produced consumer articles became available easily to those who needed them. So questions of transport which increases the cost of production which are all added to the cost price and which lead to the artificial increase of rates at which they are sold—those things will probably be eliminated and cheaper things will be available if cottage industries are aided The Government do contemplate that. The Government have more in their mind the small industries than large industries. It is a thing that ought to be encouraged and it should not be given up because of some shortcomings inevitable in human beings. Let that aspect of the case be not considered; nor failure of the industry. There is no guarantee that every industry, if it is started, will prosper and will not go into liquidation. That depends upon the management; that depends upon factors other then the State giving aid. But aid need not be held up because those who give aid feel that certain industries will ultimately fail. On the other hand, the attempt should be to encourage every industry even if it is in a failing condition. I am told that in America Courts of Insolvency are not functioning in the manner in

(JANAB MOHAMED HANIEF.)

which they are functioning here. I am told that if any businessman as a result of adverse circumstances over which he has no control is on the verge of bankruptcy, his constituents, *i.e.* those that supply the material, whatever it is, go to his aid and give him double the quantity or more quantity than what he was being given previously when he was reduced to that position, and make him tide over the position and make him prosperous. Such an attempt will be the result if this Bill is properly implemented and aid is given where it is most deserved. Therefore, we are trying to make our country industrially minded. We are determined to see that cottage industries thrive. We are also anxious that every village should become a centre of industry. If these are the aims and ends, nothing is better than aid being given by the State at a minimum rate of interest and the maximum amount of encouragement being given to them to make the industries bright and prosperous.

With these words, I support the Bill.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಈ ಮಸೂದೆಯಲ್ಲಿ ಮೂರು ನಾಲ್ಕು ಮುಖ್ಯ ಅಂಶಗಳಿವೆ. ಮೊದಲನೆಯದಾಗಿ ದೇಶದ ಪ್ರಗತಿಗೆ ಸಹಾಯವಾಗತಕ್ಕಂಥ ಕೈಗಾರಿಕೆಯನ್ನು ಸ್ಥಾಪಿಸುವುದಕ್ಕೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡುವುದು. ಎರಡನೆಯದು ಸರ್ಕಾರದಿಂದ ಕೊಡಲ್ಪಟ್ಟ ಹಣ ಸರಿಯಾದ ರೀತಿಯಲ್ಲಿ ಉಪಯೋಗಿಸುವಂತೆ ನೋಡಿಕೊಳ್ಳುವುದು. ಮೂರನೆಯದು ಕೊಟ್ಟ ಹಣವನ್ನು ಸರಿಯಾದ ಮತ್ತು ನೂಕ್ತವಾದ ರೀತಿಯಲ್ಲಿ ವಸೂಲು ಮಾಡುವುದು. ಈ ಮೂರು ಅಂಶಗಳನ್ನೂ ಈ ಮಸೂದೆಯು ಒಳಗೊಂಡಿದೆ. ಶ್ರೀ ಗುಂಡಪ್ಪ ಗೌಡರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಹೇಳಿದ ಮಾತುಗಳು ಕೈಗಾರಿಕಾ ಕ್ಷೇತ್ರಕ್ಕೆ ಮಾತ್ರವಲ್ಲದೆ ಪ್ರತಿಯೊಂದು ಕ್ಷೇತ್ರಕ್ಕೂ ಕೂಡ ಅನ್ವಯಿಸುತ್ತವೆ. ಎಲ್ಲಿಯವರೆಗೆ ನಮ್ಮ ಜನರ ಪ್ರಾಮಾಣಿಕತೆಯ ಮಟ್ಟವು ಉತ್ತಮವಾಗುವುದಿಲ್ಲವೋ, ಎಲ್ಲಿಯವರೆಗೆ ನಮ್ಮ ದೇಶದ ಜನರಲ್ಲಿ ದೇಶಾಭಿಮಾನವುಂಟಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ದೇಶದ ಪ್ರಗತಿ ಸಾಧನೆಯಾಗುವುದಿಲ್ಲವೆಂಬ ಒಂದು ತೀರ್ಮಾನವನ್ನು ನಾನು ಮಾಡಿದ್ದೇನೆ. ಆದರೆ ಅಲ್ಲಿಯವರೆಗೆ ನಾವು ನುಮ್ಮನಿರಬೇಕೆ? ಸರ್ಕಾರದ ಕೈಲಿ ಸಾಧ್ಯವಾಗುವ ಸಹಾಯಗಳನ್ನು ಮಾಡದಾರದೆ ಎಂದು ಮಿತ್ರರಾದ ಶ್ರೀ ಗುಂಡಪ್ಪಗೌಡರನ್ನು ಕೇಳಬೇಕಾಗಿದೆ. ಇದ್ದ ಸಾಮಾನುಗಳಿಂದಲೇ ಕೆಲಸ ಮಾಡಬೇಕು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಕೊಡಕೂಡದೆಂದು ಹೇಳುವುದಿಲ್ಲ ಕೊಡುವಾಗ ಸ್ವಲ್ಪ ಹುಷಾರಾಗಿರಬೇಕೆಂದು ಹೇಳಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ನಮ್ಮ ಜನರಲ್ಲಿ ಪ್ರಾಮಾಣಿಕತನ ಕಡಮೆ. ಆದರೆ ಇರುವ ವಸ್ತುಗಳನ್ನೇ ಉಪಯೋಗಿಸಿ ನಮ್ಮ ಕೈಗಾರಿಕೆಯನ್ನು ಮಾಡಬೇಕಾಗುತ್ತದೆ. ಈ ರೀತಿಯಾಗಿ ಈಗ ಮಾಡುತ್ತಿಲ್ಲವೆ? ಬಾಕಿ ಕ್ಷೇತ್ರಗಳಲ್ಲೂ ಹಾಗೆ ಮಾಡುವುದಿಲ್ಲವೆ? ಅದೇ ರೀತಿಯಾಗಿ ಕೈಗಾರಿಕಾ ಕ್ಷೇತ್ರದಲ್ಲೂ ಕೂಡ ಇದ್ದ ವಸ್ತುಗಳನ್ನೇ ಉಪಯೋಗಿಸಿಕೊಂಡು ದೇಶದ ಪ್ರಗತಿ ಸಾಧಿಸುವುದಕ್ಕೆ ಪ್ರಯತ್ನ ಪಡುವುದು ಅತ್ಯಗತ್ಯವಾಗಿದೆ. ಇದಲ್ಲದೆ ಜಾಯಿಂಟ್ ಸ್ಟಾಕ್ ಕಂಪನಿ ವಿಚಾರವಾಗಿ ಶ್ರೀ ಗುಂಡಪ್ಪಗೌಡರು ಕೆಲವು ಮಾತುಗಳನ್ನು ಹೇಳಿದರು. ಅದು ನಿಜ. It is no body's property ಎಂಬ ಮನೋಭಾವ ನಮ್ಮಲ್ಲಿ ಬೆಳೆದಿದೆ. ತಮ್ಮ ಸ್ವಂತ ಸ್ವತ್ತು, ಆಸ್ತಿ ಎಂಬ ಮನೋಭಾವ ಕಾರ್ಮಿಕರಲ್ಲಿ ಬೆಳೆಯಬೇಕು. ಆ ರೀತಿಯ ಮನೋಭಾವ ಉಸ್ತುವಾರಿ ನೋಡಿಕೊಳ್ಳುವ ಸೂಪರ್‌ವೈಜರುಗಳಲ್ಲೂ ಕೂಡ ವೃದ್ಧಿಯಾಗಬೇಕು. ದುರಾದೃಷ್ಟವಶಾತ್ ಈ ದಿವಸ ಈ ಎರಡು ಮನೋಭಾವಗಳೂ ಇಲ್ಲ. ಕ್ರಮೇಣ ಅದು ಬರಬೇಕು. ಸಾರ್ವಜನಿಕ ಅಭಿಪ್ರಾಯ ಸರಿಯಾದ ರೀತಿಯಲ್ಲಿ ರೂಪುಗೊಂಡು ಈ ಮಾರ್ಗದಲ್ಲಿ ಪ್ರಗತಿಯನ್ನು ಸಾಧಿಸಬೇಕಾಗಿದೆ.

ಆಮೇಲೆ ಮಸೂದೆಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇದರಲ್ಲಿ ಸಾಮಾನ್ಯವಾಗಿ ಕೊಡುವ ಸಹಾಯವು ಮೈನೂರಿನವರಿಗೇ ದೊರೆಯುವುದಕ್ಕೆ ಅವಕಾಶ ಕೊಡಬೇಕೆಂದು ಸೂಚಿಸುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹೊರಗಿನವರು ಬಂದು ನೆಲಸಿದ್ದಾರೆ. ಅವರು ಕೇಳಿದರೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೆಚ್ಚಾಗಿದ್ದರೆ ಅವರಿಗೂ ಅವಕಾಶ ಮಾಡಬಹುದು. ಯಾವ ಅರ್ಜಿಯೂ ನಿಷ್ಕಾರಣವಾಗಿ ತಿರಸ್ಕರಿಸಲ್ಪಡಲು ಅವಕಾಶವಿಲ್ಲ. ಎಂಟನೆಯ ನೆಕ್ಷೆಕ್ ಪ್ರಕಾರ ಜಿಲ್ಲಾ ಸಮಿತಿಯನ್ನು ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಯಾವ ಅರ್ಜಿ ಕೊಟ್ಟರೂ ಕೂಡ ಡಿಸ್ಟ್ರಿಕ್ಟ್ ಸಮಿತಿಯ ಮುಂದೆ ಬಂದು ಆಮೇಲೆ ಸಂಸ್ಥಾನದ ಸಮಿತಿಯ ಮುಂದೆ ಬರುವುದಕ್ಕೆ ಅವಕಾಶವಿದೆ. ಯಾವ ಒಂದು ಅಹವಾಲೂ ನಹ ನಿರ್ಲಕ್ಷತೆಯಿಂದ ವಜಾ ಆಗಲು ಕಾರಣವಿಲ್ಲ. ಈ ಎರ್ಥಾ ದೃಷ್ಟಿಯಿಂದ ಈ ಮಸೂದೆಯು ಸ್ವಾಗತಾರ್ಹವಾಗಿದೆ. ಆದ್ದರಿಂದ ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

The Hon'ble Sri H. C. DASAPPA.—Mr Speaker, Sir, when I presented this Bill for consideration of the House, I did not anticipate such a fine, apprehensive and instructive discussion that has now been my privilege to listen. I must say, Sir, that for a matter of that not only this Bill, but any measure however salutary and good it may be, must depend upon proper implementation for its success. That is more or less an axiomatic truth, and therefore if some of the Hon'ble Members here and there have expressed their doubts that this Bill by itself is not going to work out the industrial destiny of this land, I do not think I should enter into

any dispute with them. Sri H. B. Gundappa Gowda has touched on some very important aspects of our life itself, and I must say that I am entirely in agreement with him that if India has to progress, has to get out of its despondency, has to get rid of its poverty and ignorance and all these evils that now surround us it necessarily means that national traits of the citizens must improve. There is no doubt about it. This question of industrial development is only one aspect of our activities as Sri Kadidal Manjappa and Janab Mohamed Hanief and others pointed out. So that the mere fact that there have been rather sorry experiences in the past should not mean that we should not take every measure to eradicate those evils that are now existing in society and in the business world and change over to the manner in which the rest of the progressive countries in the world have been handling their industries and their economy. Sir, I do not think that free India should any longer go in a rather limping manner, but must resort to every possible measure which will put it on its rails and take us rapidly towards the goal of prosperity that we have in future. Therefore, while the diagnosis of Sri H. B. Gundappa Gowda may be correct, the very fact that the disease is so malignant, so deep-seated and possibly so wide-spread, is the very reason why we must make spirited human efforts to set right matters. I think if this measure does not go all the way, at any rate it does take somewhere towards achieving that very goal which he and our other friends have got in view. One of the points that were raised is that there is something in the atmosphere itself of the country which disables them from getting together, organising industries and running them efficiently. I do not think that there is very much of truth in that. But in experience it appears to us as though Mysoreans are not going out for this kind of business activity.

You will see Sir, that quite apart from that this Bill is primarly intended to increase the initiative, independence and drive and organising capacity of the people at large in Mysore State. I do not want to dilate very much on that. Take the whole scheme of Rural Development of whose counterpart Sri Gundappa Gowda himself was the author; take again the multi-purpose co-operative societies ; the entire ramifications of the co-operative movement that we have set up; take again Sir M. Visvesvaraya's Rural Industrialisation scheme, the primary object of which is to increase the initiative and drive among the people. Now all these are ancillary to achieve this one object which we have in view and I think this Bill which does not concern itself so much with the big industries or even with the medium scale industries, but concerns much more with the cottage and small scale industries, is just intended to serve that very purpose.

Certain aspects of the case were referred to Sir, namely that in handling this fund intended for aiding industries, there is likely to be some amount of personal factor operating. It was not said in so many words that there would be favouritism and so on. I say that it is just to avoid that that this bill is conceived of, to lift it out of the patronage of any single person either in the Department on in the Government, in the Ministry and place it in the hands of a technical, independent and impartial body. This Bill is just answering that very question which has been put by Sri Gundappa Gowda.

Take again the other point Janab Hanief suggested, namely that as far as possible we must prevent this pilgrimage to cities and towns. There has been a considerable landslide from the villages to the towns and cities because of certain attractions in these places and possibly greater conveniences. This Bill again is just to serve that purpose also, to see that the rural areas are industrialised and all the amenities that are available in cities and towns are made available in villages so that there is no temptation for the villager to run away from the villages to the towns and cities.

So I think Sir, that this Bill as many Hon'ble Members have said has come at the right time. Personally I wish

(THE HON'BLE SRI H. C. DASAPPA.)

that this could have come in earlier. But I wanted to see what shape the Central Finance Corporation and the State Finance Corporation would take after they were constituted. Now we have got a picture of those corporations and this Bill has been drafted with that picture in view. I am indeed very thankful to the Hon'ble Leader of the Opposition and other Hon'ble Members for having given these valuable suggestions. I personally find it difficult to understand whether there is need for this piece of legislation requiring further consideration at the hands of a Select Committee. But I do not want to anticipate; it is quite likely that there may be some. Since the Hon'ble Mover of the amendment wants it to go to a Select Committee and since other Hon'ble Members also have suggested it, I have no objection to have the matter referred to a Select Committee for its report. The only question is whether they should report during this session or at the next session. If it is the intention of the mover that it should be reported during this Session I welcome it because it is quite possible for me to pilot this Bill in this session. But if it is necessary to take it up at the next Session, I am quite prepared to accept that also.

Mr. SPEAKER.—The question is:

"That the Mysore State Aid to Industries Bill, 1951, be referred to a Select Committee consisting of:

The Hon'ble Sri H. C. Dasappa (Chairman),
Sri A. Bheemappa Naik,
Sri M. L. Nanjaraj Urs,
Sri Mali Mariappa,
Janab Mahomed Imam,
Sri G. A Acharya and the Mover,

with instructions to report during this session alone."

The motion was adopted.

Request for a holiday on Saturday, the 27th January on account of Commonwealth Cricket Match.

*Mushir-ul-Mulk J. MOHAMED IMAM (Chitaldrug *cum* Tumkur—Muslim).—Before proceeding further with the business, it is better that I bring one point to the notice of this House.

Many Hon'ble Members of this House are anxious that Saturday must be declared as a holiday because on that day the Commonwealth Cricket Team will be visiting the State, which is a rare occasion and many of us are anxious to take advantage of that occasion. So, on behalf of the Members, I submit to you and to the Members of the Cabinet that Saturday may be declared as a holiday and that the work of that day may be adjusted to some other day. It is an appeal.

(Interruption.)

Mr. SPEAKER (The Hon'ble Sri V. Venkatappa).—Sri H. K. Veeranna Gowda suggests why we should not meet in the morning.

The Hon'ble Sri H. C. DASAPPA (Minister for Finance and Industries).—I will be able to report to you, Sir, tomorrow exactly the views of the Government. But I may say it would not be possible to hold a morning Session because His Highness will be going there at 10-50 A.M., and the match will commence at 11 of the clock. So, at the most, we can have some two or three hours' session.

Janab J. MOHAMED IMAM.—The Hon'ble Minister himself is a good cricketeer. He scored 36 runs recently. I am sure he will be the first to welcome my suggestion.

Mysore Debt Conciliation (Amendment) Bill, 1951.

Presentation of the Report of Select Committee.

The Hon'ble Sri H. C. DASAPPA (Minister for Finance and Industries).—Sir, on behalf of the Hon'ble Minister for Law and Labour, I beg to present the report of the Select Committee on the Mysore Debt Conciliation (Amendment) Bill, 1951.

Janab J. MOHAMED IMAM (Chitaldrug *cum* Tumkur—Muslim).—Let me ask the Hon'ble Finance Minister,

Sir, where his colleague the Hon'ble Law Minister is ? I am entitled to know why he is away from this House and whether he is keeping good health.

The Hon'ble Sri H. C. DASAPPA.— He is in perfect health. It is only on account of exigencies of circumstances, he is not here now; nothing else.

The Hon'ble Members will see that the Bill has not been altered in any material manner.

Mysore Village Panchayets and District Boards Bill, 1951

Motion to consider.

The Hon'ble Sri R. CHENNIGARAMIAH (Minister for Local Self-Government).—Sir, I beg to move :

"That the Mysore Village Panchayets and District Boards Bill, 1951, be taken into consideration and referred to a Select Committee consisting of the following members:

Rajamantrapravina H. B. Gundappa Gowda,
Sri H. M. Channabasappa,
Sri H. K. Veeranna Gowda,
Sri S. Rangaramiah,
Sri H. C. Linga Reddy,
Sri M. Govinda Reddy,
Sri M. Madiah,
Lokasevaniratha M. Hanumanthiah,
Sri Mudduramiah,
Sri B. Hutche Gowda."

ಅಧ್ಯಕ್ಷರೇ, ಈ ಮಸೂದೆಯನ್ನು ಈ ಶಾಸನ ಸಭೆಯ ಮುಂದೆ ಇಡುವುದಕ್ಕೆ ನನಗೆ ತುಂಬಾ ಸಂತೋಷವಾಗುತ್ತದೆ. ಈ ತರಹ ಮಸೂದೆ ಬಹುಶಃ ನಮ್ಮ ಇಡೀ ಇಂಡಿಯಾ ದೇಶದಲ್ಲೇ ಒಂದು ಮಾದರಿಯಾದ ಮಸೂದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಂಥಾ ಮಸೂದೆಯನ್ನು ಜಾರಿಗೆ ತರಬೇಕೆಂದು ಹೇಳಿ ಅನೇಕ ಖಾಸಗಿ ಸದಸ್ಯರು ಬಹಳ ದಿನಗಳಿಂದಲೂ ಒತ್ತಾಯ ಪಡಿಸುತ್ತಾ ಇದ್ದರು. 1949ನೆಯ ಇನವಿಯಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲೂ ಮತ್ತು ನ್ಯಾಯ ವಿಧಾಯಿಕ ಸಭೆಯಲ್ಲೂ ತರಾವನ ಮುಖಾಂತರ ಈ ಅಂಶವನ್ನು ಸರ್ಕಾರದ ಗಮನಕ್ಕೆ ತಂದಿದ್ದರು. ಖಾಸಗೀ ಜನಗಳ ಅಭಿಪ್ರಾಯದ ಪ್ರಕಾರ ಸರ್ಕಾರದವರು ಒಂದು ಸಮಿತಿಯನ್ನು ಈ ಸಭಾಧ್ಯಕ್ಷರಾಗಿರತಕ್ಕವರ ಅಧ್ಯಕ್ಷತೆಯಲ್ಲಿ ನೇಮಕ ಮಾಡಿದರು. ಆ ಸಮಿತಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿರತಕ್ಕವರೂ ಮತ್ತು ಸದಸ್ಯರಾಗಿರತಕ್ಕವರೂ ಅಲ್ಲದೆ ಹಿಂದೆ ಅನುಭವಿಗಳಾಗಿದ್ದವರೂ ಬಹಳ ಉತ್ಸಾಹಶಾಲಿಗಳೂ ಸಮಿತಿಯ ಸದಸ್ಯರಾಗಿದ್ದರು. ಅವರು ಬಹಳ ದೀರ್ಘಾಲೋಚನೆಮಾಡಿ ಒಂದು ವರದಿಯನ್ನು ಸರ್ಕಾರದವರಿಗೆ ಕಳುಹಿಸಿಕೊಟ್ಟರು. ಈ ಸಭೆಯ ಸದಸ್ಯರಿಗೆ ಗೊತ್ತಿರುವಹಾಗೆ ಪಂಚಾಯಿತಿಗಳು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳು ನಮ್ಮ ದೇಶದಲ್ಲಿ 25 ವರ್ಷಗಳಿಂದಲೂ ಆಡಳಿತ ನಡೆಸಿಕೊಂಡು ಬರುತ್ತಾ ಇವೆ. ಕಾಲಕ್ಕನುಗುಣವಾಗಿ ಮಾರ್ಪಾಡು ಮಾಡಬೇಕಾದ್ದು ಮಾದರಿ ಸರ್ಕಾರದ ಮಾರ್ಗವಾಗಿರಬೇಕು. ಆದಕ್ಕೋಸ್ಕರವೇ ಈ ಕಾನೂನನ್ನು ಹೊಸದಾಗಿ ತಯಾರು ಮಾಡಲಾಗಿದೆ. ಕಾಲಕ್ಕನುಗುಣವಾಗಿ ಪಂಚಾಯಿತಿ ಡಿಸ್ಟ್ರಿಕ್ಟ್ ಬೋರ್ಡ್‌ಗಳ ಹಿಂದಿನ ಆಡಳಿತದಲ್ಲಿದ್ದ ನ್ಯೂನತೆಗಳನ್ನು ಸರಿಪಡಿಸಿ ಈ ಒಂದು ಕಾನೂನನ್ನು ತಂದು ಈ ಮುಖೇನ ಪ್ರಜೆಗಳಿಗೆ ಹೆಚ್ಚಿನ ಅಧಿಕಾರ ಮತ್ತು ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಉದ್ದೇಶಿಸಲಾಗಿದೆ. ಇದರಲ್ಲಿ ಮುಖ್ಯವಾದ ಅಂಶವೇನೆಂದರೆ, ಪಂಚಾಯಿತಿಯವರು ಒಂದು ಕಡೆ, ರೂರಲ್ ಡೆವಲಪ್‌ಮೆಂಟ್‌ನವರು ಒಂದು ಕಡೆ, ಡಿಸ್ಟ್ರಿಕ್ಟ್ ಬೋರ್ಡ್‌ನವರು ಒಂದ ಕಡೆ ಈ ರೀತಿ ಮೂರು ವಿಧದಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಾ ಇದ್ದರು. ಶಕ್ತ್ಯಾನುಸಾರ ಈ ಮೂರು ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಿವೆ. ಅಲ್ಲಲ್ಲಿ ಬಹುಮಟ್ಟಿಗೆ ಖಾಸಗೀ ಸದಸ್ಯರು ಮತ್ತು ಚೇರ್ಮನ್ನರು ಇದ್ದು ಕೆಲಸವನ್ನು ಬಹಳ ದಕ್ಷತೆಯಿಂದ ಮಾಡಿದ್ದಾರೆ. ಸುಮಾರು 25 ವರ್ಷಗಳಿಂದಲೂ ಈ ಆಡಳಿತ ನಡೆದು ನಂತರ ಈಗಿನ ಕಾಲಕ್ಕೆ ಅನುಗುಣವಾಗಿ ಯಾವ ಬದಲಾವಣೆ ಮಾಡಬೇಕು ಎಂಬ ವಿಷಯದಲ್ಲಿ ಅವರ ಅನುಭವವನ್ನು ತೆಗೆದುಕೊಂಡಿದ್ದೇವೆ. ಈ ರೀತಿ ಪ್ರತ್ಯೇಕವಾಗಿ ಮೂರು ಸಂಸ್ಥೆಗಳು ಕೆಲಸ ಮಾಡತಕ್ಕದ್ದು ಈಗಿನ ಕಾಲಕ್ಕೆ ಅಷ್ಟು ಸೂಕ್ತವಾಗಿ ಕಾಣುವುದಿಲ್ಲ. ಒಂದು ದೇಶದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಸ್ಥಳೀಯ ಸಂಸ್ಥೆಗಳು ಕಾರ್ಯಕಲಾಪಗಳನ್ನು ನಡೆಸುವುದರಿಂದ ಕೆಲವು ಸಂದರ್ಭದಲ್ಲಿ ಒಂದಕ್ಕೊಂದಕ್ಕೆ ಜಿಜ್ಞಾಸೆ ಬಂದು, ಕೆಲಸಕಾರ್ಯಗಳು ಸೂಕ್ತವಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಒಂದೇ ಒಂದು ಸಂಸ್ಥೆಯ ಮುಖೇನ ನಡೆಸಿದರೆ ಇನ್ನೂ ಸುಸೂತ್ರವಾಗಿ, ಚೆನ್ನಾಗಿ ಕೆಲಸ ಕಾರ್ಯಗಳು ನಡೆಯಲು ಅನುಕೂಲವಾಗುತ್ತದೆ ಎಂದೂ ಅಭಿಪ್ರಾಯ ಬಂತು. ಹೀಗೆ ಮಾಡುವುದರಿಂದ ಅದರ ಆರ್ಥಿಕಮಟ್ಟ ಏರುತ್ತದೆ. ಈಗ ಇರತಕ್ಕ ಪಂಚಾಯಿತಿ, ರೂರಲ್ ಡೆವಲಪ್‌ಮೆಂಟ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳಲ್ಲಿ ಆರ್ಥಿಕಮುಗ್ಗಟ್ಟು ಬಹಳವಾಗಿದೆ. ಇದನ್ನು ಸರಿಪಡಿಸಿ, ಸಾಕಾದಷ್ಟು ಸೌಕರ್ಯ ಒದಗಿಸಬೇಕಾದರೆ, ಅವೆಲ್ಲವನ್ನೂ ಒಟ್ಟುಗೂಡಿಸುವುದು ಒಳ್ಳೆಯದು. ಎಲ್ಲಿ ಅವಶ್ಯಕತೆ ಇರುತ್ತದೆಯೋ ಅಂಥ ಕಡೆಗಳಿಗೆ ಬಂದು ಯೋಜನೆ ಹಾಕಿ ಹೆಚ್ಚು ಹಣ ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆ.—ಈಗ ಹಣ ಇರುವುದು ಈ ಮೂರು ಸಂಸ್ಥೆಗಳಿಗೂ ವಿಭಾಗವಾಗಿರುವುದರಿಂದ ಹೆಚ್ಚಿನ ಹಣ ಉಪಯೋಗಿಸಿ ಅತಿ ಮುಖ್ಯವಾದ ಒಂದು ಯೋಜನೆಗೆ ಖರ್ಚು ಮಾಡಲು ಅನುಕೂಲವಿಲ್ಲ. ಆದ್ದರಿಂದಲೇ ಈ ಮೂರನ್ನೂ ಒಟ್ಟುಗೂಡಿಸುವ ಏರ್ಪಾಡು ಮಾಡಲಾಗಿದೆ.

ಪಂಚಾಯಿತಿಗೆ ವಯಸ್ಕರ ಮತದಾನ ಪದ್ಧತಿ ಪ್ರಕಾರ ಚುನಾವಣೆ ನಡೆಯಬೇಕೆಂದು ಈ ಮಸೂದೆಯಲ್ಲಿ ಕಾಣಿಸಿದೆ. ಡಿಸ್ಟ್ರಿಕ್ಟ್ ಬೋರ್ಡ್‌ಗೆ ಇದುವರೆಗೂ ಆಸ್ತಿ ಮುಂತಾದುವುಗಳ ಆಧಾರದ ಮೇರೆ ಮತದಾರರು ಆಗುತ್ತಾ ಇದ್ದರು. ಚುನಾವಣೆಯೂ ಸಹ ಒಂದು ರೀತಿಯಲ್ಲಿ ನೇರವಾಗಿ ಆಗುತ್ತಾ ಇತ್ತು. ಈ ಕಾನೂನು ಪ್ರಕಾರ ಮೊದಲು ಪಂಚಾಯಿತಿಗಳಿಗೆ ವಯಸ್ಕರ ಮತದಾನ ಪದ್ಧತಿ ಪ್ರಕಾರ ಚುನಾವಣೆ ನಡೆಯುತ್ತದೆ. ಡಿಸ್ಟ್ರಿಕ್ಟ್ ಬೋರ್ಡ್‌ಗೆ ಪಂಚಾಯಿತಿಗಳಿಂದ ಚುನಾವಣೆ ಆಗುತ್ತದೆ. ಏಕೆಂದರೆ ಪಂಚಾಯಿತಿ, ಡಿಸ್ಟ್ರಿಕ್ಟ್ ಬೋರ್ಡು ರೆಪ್ರೆಸೆಂಟೆಟಿವ್ ಅಸೆಂಬ್ಲಿ

(THE HON'BLE SRI R. CHENNIGA-RAMIAH.)

ಇವೆಲ್ಲಕ್ಕೂ ನೇರವಾಗಿ ಚುನಾವಣೆ ಆಗಬೇಕೆಂದರೆ ವಯಸ್ಕರ ಮತದಾನದ ಪದ್ಧತಿ ಪ್ರಕಾರ ತೊಂದರೆ ಆಗುತ್ತದೆ ಎಂದು ಕೂಲಂಕಷವಾಗಿ ಯೋಚನೆ ಮಾಡಿ ಆ ಸಮಿತಿಯವರು ಡಿಸ್ಟ್ರಿಕ್ಟ್ ಬೋರ್ಡ್‌ಗೆ ಈ ರೀತಿ ಅಪ್ರತ್ಯಕ್ಷ ಚುನಾವಣಾ ಪದ್ಧತಿ ಇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಅದರಂತೆ ಈ ಕಾನೂನಿನಲ್ಲಿ ಮಾಡಲಾಗಿದೆ. ಇದುವರೆಗೂ ಇದ್ದ ನಾಮಕರಣ ಪದ್ಧತಿಯನ್ನೂ ಸಹ ತೆಗೆದುಹಾಕಲಾಗಿದೆ. ಸರ್ಕಾರದವರು ಡಿಸ್ಟ್ರಿಕ್ಟ್‌ಬೋರ್ಡ್ ಸದಸ್ಯರ ಚುನಾವಣೆ ಆದಮೇಲೆ ಕೆಲವರನ್ನು ನಾಮಕರಣ ಮಾಡುವ ಪದ್ಧತಿ ಇದುವರೆಗೂ ಇತ್ತು. ಈ ಕಾನೂನು ಪ್ರಕಾರ ಆ ನಾಮಕರಣ ಪದ್ಧತಿ ಹೋಗುತ್ತದೆ; ಮತ್ತು ಈ ಸಂಸ್ಥೆಯ ಆಡಳಿತವನ್ನು ನೋಡಿಕೊಳ್ಳುವುದಕ್ಕೆ ಸರ್ಕಾರದಿಂದ ನೇಮಿಸಲ್ಪಟ್ಟ ಒಬ್ಬ ಚೀಫ್ ಎಕ್ಸಿಕ್ಯೂಟೀವ್ ಆಫೀಸರೂ ಅಲ್ಲದೆ ಹಣಕಾಸಿನ ಲೆಕ್ಕಾಚಾರಗಳನ್ನೂ ಅದಕ್ಕೆ ಸಂಬಂಧಪಟ್ಟ ಕಾರ್ಯಕರಾಪಗಳನ್ನೂ ನೋಡಿಕೊಳ್ಳುವುದಕ್ಕೆ ಒಬ್ಬ ಸೆಕ್ರೆಟರಿಗಳೂ ಇರುತ್ತಾರೆ. ಈ ರೀತಿಯ ಒಬ್ಬ ಇರಾಖೆಯ ಮುಖ್ಯಾಧಿಕಾರಿಗಳು ಈ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕೆ ಇದುವರೆಗೂ ಇರಲಿಲ್ಲ. ಇನ್ನು ಮೇಲೆ ಇರುತ್ತಾರೆ. ಅವರಿಗೆ ಈ ಆಡಳಿತದ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಅಧಿಕಾರವಿರುತ್ತದೆ.

ಎರಡನೆಯದಾಗಿ ಇದುವರೆಗೂ ಡಿಸ್ಟ್ರಿಕ್ಟ್ ಬೋರ್ಡ್ ಕಾನೂನು ಪ್ರಕಾರ ಆಗಲೀ, ಪಂಚಾಯಿತಿ, ರೂರಲ್ ಡೆವಲಪ್‌ಮೆಂಟ್ ಕಾನೂನು ಪ್ರಕಾರ ಆಗಲಿ ನಮ್ಮ ತರಗತಿಯವರಿಗೆ ಇಷ್ಟೇ ಸೀಟು ಕೊಡಬೇಕೆಂದು ನಿಯಾಮಕವಿರಲಿಲ್ಲ. ಆದರೆ ಸರ್ಕಾರದವರು ನಾಮಕರಣ ಮುಖೇನ ಅವರಿಗೆ ಪ್ರಾತಿನಿಧ್ಯ ಕೊಡುತ್ತಿದ್ದರು. ಶಾಸನದ ಪ್ರಕಾರ ಇಷ್ಟೇ ನಿಗದಿಯಾಗಿ ಅವರ ಪ್ರಜಾ ಸಂಖ್ಯೆಗನುಗುಣವಾಗಿ ಸೀಟು ಕೊಡಬೇಕೆಂದೂ ಮತ್ತು ಚುನಾವಣಾ ಮುಖೇನ ಅವರು ಚುನಾಯಿತರಾಗಿ ಬರಬೇಕೆಂದೂ ಒಂದು ಉತ್ತಮ ಸಲಹೆ ಕೊಟ್ಟಿದ್ದಾರೆ. ಇದಕ್ಕಿಂತಲೂ ಅತಿ ಮುಖ್ಯವಾದ ಒಂದು ಅಂಶ ಬೇನೆಂದರೆ ಇದುವರೆಗೂ ಪಂಚಾಯಿತಿ, ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ರೂರಲ್ ಡೆವಲಪ್‌ಮೆಂಟ್ ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ನಿಗದಿಯಾಗಿ ಹಣವನ್ನು ಸರ್ಕಾರದವರು ಕೊಡುತ್ತಿರಲಿಲ್ಲ. ಆಗಾಗ್ಗೆ ಕೆಲವು ಗ್ರಾಂಟುಗಳನ್ನು ಕೊಡುತ್ತಾ ಇದ್ದಾರೆ. ಆದರೆ ನಿಯಾಮಕವಾದ ಒಂದು ಕಡ್ಡಾಯ ವಿರಲಿಲ್ಲ. ಈಗ ಇದಕ್ಕಾಗಿ ನಿಗದಿಯಾದ ಒಂದು ಮೊತ್ತವನ್ನು ಕೊಡಬೇಕೆಂದು ಮಾಡಿರುತ್ತಾರೆ. ಈ ತರಹ ಕಾನೂನು ನಮ್ಮ ದೇಶದಲ್ಲಿ ಮೊಟ್ಟ ಮೊದಲು ಜಾರಿಗೆ ಬರತಕ್ಕದ್ದಾಗಿದೆ.

ಆದ್ದರಿಂದ ನಮ್ಮ ದೇಶವನ್ನು ಇತರೇ ದೇಶಗಳೊಡನೆ ಹೋಲಿಕೆ ಮಾಡಿ ನೋಡಿದರೆ ಇಲ್ಲಿರತಕ್ಕ ರಸ್ತೆಗಳ ಸ್ಥಿತಿ, ಪಂಚಾಯ್ತಿಗಳ ಕೆಲಸ, ಡ್ರೈನೇಜು ವ್ಯವಸ್ಥೆ, ನೈರ್ಮಲ್ಯ ಬಹಳ ಮಟ್ಟಿಗೆ ಚೆನ್ನಾಗಿದ್ದು ಇಲ್ಲಿನ ಪಂಚಾಯ್ತಿಗಳ ಆಡಳಿತ ಎಷ್ಟರಮಟ್ಟಿಗೆ ಉತ್ತಮಗೊಂಡಿವೆಯೆಂಬುದು ಗೊತ್ತಾಗುತ್ತದೆ. ಮೊನ್ನೆ ತಾನೆ ಡೆಲ್ಲಿಯಲ್ಲಿ ಸ್ಥಳೀಯ ಸಂಸ್ಥೆಗಳ ಕಾನ್ಫರೆನ್ಸ್ ಆಯಿತು. ನಮ್ಮ ಮೈಸೂರಿನಿಂದಲೂ ಅನೇಕ ಜನ ಸದಸ್ಯರು ಅಲ್ಲಿಗೆ ಹೋಗಿದ್ದರು. ಅಲ್ಲಿ ಅವರು ಚರ್ಚೆ ಮಾಡಿದ ಅನೇಕ ಮುಖ್ಯ ವಿಷಯಗಳಲ್ಲಿ ಅನೇಕವು ಈಗಾಗಲೇ ನಮ್ಮ ದೇಶದಲ್ಲಿ ಬಹಳ ಹಿಂದಿನಿಂದ ಜಾರಿಯಲ್ಲಿರತಕ್ಕವುಗಳಾಗಿವೆ. ಅಂದ ಮೇಲೆ ನಮ್ಮ ದೇಶ ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತ, ಪಂಚಾಯ್ತಿ ಆಡಳಿತ ಮುಂತಾದುವುಗಳಲ್ಲಿ ಬಹಳ ವರ್ಷಗಳಿಂದಲೂ ಮುಂದುವರಿದಿದೆಯೆಂಬುದು ವೇದ್ಯವಾಗುತ್ತದೆ. ಇದರಿಂದ ನಾವು ಅನುಸರಿಸುತ್ತಿರತಕ್ಕ ಮಾರ್ಗ ಎಲ್ಲರೂ ಒಪ್ಪತಕ್ಕದ್ದಾಗಿದೆಯೆಂದು ಗೊತ್ತಾಗುತ್ತದೆ. ಈಗ ಈ ಸ್ಥಳೀಯ ಸಂಸ್ಥೆಗಳ ಸ್ಥಾನವನ್ನು ಇನ್ನೂ ಭದ್ರಪಡಿಸುವುದಕ್ಕೆ ಈ ಮಸೂದೆಯಲ್ಲಿ ಪ್ರಯತ್ನ ಪಟ್ಟಿದ್ದೇವೆ. ಸಂಸ್ಥಾನದ ಜಮಾನು ಕಂದಾಯದಲ್ಲಿ ಶೇಕಡ 25 ರಷ್ಟನ್ನು ಹೇಗೆಂದರೆ ಡಿಸ್ಟ್ರಿಕ್ಟ್ ಬೋರ್ಡಿಗೆ 6¼% ಪಂಚಾಯಿತಿಗೆ 6¼%, ಇನ್ನುಳಿದ 12½%ನ್ನು ಸಂಸ್ಥಾನದ ನಾನಾ ಸ್ಥಳೀಯ ಸಂಸ್ಥೆಗಳ ಅವಶ್ಯಕತೆಗಳಿಗನುಸಾರವಾಗಿ ಹಂಚಿಗೆ ಮಾಡುವುದು-ಈ ಪ್ರಕಾರ ಸ್ಥಳೀಯ ಸಂಸ್ಥೆಗಳಿಗಾಗಿ ವಿಶಾಲರಾಗಿರುವುದರಿಂದ ಅವುಗಳ ಆಡಳಿತ ದಕ್ಷತೆ, ಕಾರ್ಯಕ್ಷೇತ್ರ ಬಹಳ ಮಟ್ಟಿಗೆ ಉತ್ತಮಗೊಳ್ಳುತ್ತದೆ. ಸರ್ಕಾರದವರು ಈ 25% ನಷ್ಟರಲ್ಲಿ 12½%ನ್ನು ತಮ್ಮಲ್ಲಿ ರಿಸರ್ವ್‌ನಲ್ಲಿಟ್ಟುಕೊಂಡಿರುವುದರ ಉದ್ದೇಶವಾದರೂ ಇಷ್ಟೆ. ಈಗ ನಾನು ಹೇಳಿದಂತೆ ಪಂಚಾಯ್ತಿಗಳಿಗೆ 6¼% ನಮ್ಮ ಹಣ ಕೊಡುವುದಾದರೂ ಎಲ್ಲಾ ಪಂಚಾಯ್ತಿಗಳಿಗೂ ಒಂದೇ ಸಮನಾಗಿ ಹಣ ಬರುತ್ತದೆಂದು ಹೇಳಲಾಗುವುದಿಲ್ಲ. ಕೆಲವು ಪಂಚಾಯ್ತಿಗಳಲ್ಲಿ ಜನಸಂಖ್ಯೆ ಜಾಸ್ತಿಯಿದ್ದರೂ ಆ ಪ್ರದೇಶದಲ್ಲಿ ಹೆಚ್ಚಿಗೆ ಜಮಾನುಗಳಿಲ್ಲದೆ ಜಮಾನು ಕಂದಾಯ ಕಡಿಮೆ ಬರಬಹುದು. ಇನ್ನೊಂದು ಕಡೆ ಕಡಿಮೆ ಜನಸಂಖ್ಯೆಯಿದ್ದರೂ ಹೆಚ್ಚಿಗೆ ಜಮಾನು ಕಂದಾಯ ಬರಬಹುದು. ಆದ್ದರಿಂದ ಇದನ್ನೆಲ್ಲಾ ನೋಡಿಕೊಂಡು ಆಯಾ ಪಂಚಾಯ್ತಿಗಳ ಅವಶ್ಯಕತೆಗಳನ್ನು ನೋಡಿಕೊಂಡು ಈ ರಿಸರ್ವ್‌ನಲ್ಲಿರುವ ಹಣವನ್ನೂ ಈ ಸ್ಥಳೀಯ ಸಂಸ್ಥೆಗಳವರಿಗೇ ಕೊಡುತ್ತೇವೆ. ಒಟ್ಟಿನಲ್ಲಿ ಈ 25% ನಷ್ಟನ್ನೂ ಆ ಜನಗಳ ಉಪಯೋಗಕ್ಕಾಗಿ ಕೊಡಬೇಕೆಂಬುದೇ ನಮ್ಮ ಉದ್ದೇಶ. ಈ ಹಣವನ್ನು ಬಡ್ಜೆಟ್ಟಿನಲ್ಲೇ ನಿಯಾಮಕಮಾಡಿ ಇಟ್ಟಿರುತ್ತೇವೆ. ಈ ವ್ಯವಸ್ಥೆಯಿಂದ ನಮ್ಮ ದೇಶದಲ್ಲಿನ ರಸ್ತೆಗಳು, ಡ್ರೈನೇಜ್ ವ್ಯವಸ್ಥೆ, ನೈರ್ಮಲ್ಯ ಇವೆಲ್ಲಾ ಉತ್ತಮಗೊಳ್ಳುತ್ತವೆಂಬುದರಲ್ಲಿ ಅನುಮಾನವಿಲ್ಲ. ಹಳ್ಳಿಗಾಡುಗಳಲ್ಲಿ ಇದುವರೆಗೂ ಇವುಗಳ ಅನುಕೂಲತೆ ಕಡಿಮೆಯಾಗಿರುವುದರಿಂದಲೇ ಅನೇಕ ಹಳ್ಳಿಗರು ಪಟ್ಟಣದ ಕಡೆಗೆ ವಲಸೆ ಬರುವುದಕ್ಕೆ ಇಚ್ಛೆಪಡುತ್ತಿದ್ದಾರೆ. ಈಗ ತಂದಿರತಕ್ಕ ಕಾನೂನಿನಿಂದ ಇದೂ ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆ.

ಒಟ್ಟಿನಲ್ಲಿ ಈ ಮಸೂದೆ ಎಲ್ಲಾ ವಿಧದಲ್ಲೂ ದೇಶಕ್ಕೆ ಉತ್ತಮವಾದುದಾಗಿದೆಯೆಂದು ಸರ್ಕಾರದವರಿಗೆ ನಂಬಿಕೆಯಿದೆ. ಒಳ್ಳೆಯ ಅನುಭವಸ್ಥರಾದ ಸದಸ್ಯರಿಂದ ಕಳುಹಿಸಿಕೊಡಲ್ಪಟ್ಟ ವರದಿಯ ಮೇಲೆ ಇದನ್ನು ತಂದಿದೆ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಈ ಮಸೂದೆಗೆ ಬೆಂಬಲ ಕೊಡುತ್ತಾರೆಂದು ನಂಬಿ, ಇದು ಸೆರೆಕ್ಟ್ ಸಮಿತಿಗೆ ಹೋಗಿ ಇನ್ನೂ ಉತ್ತಮಗೊಂಡು ಸಭೆಯ ಮುಂದೆ ಬರಲೆಂದು ಇದನ್ನು ಸೆರೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಸೂಚಿಸುತ್ತೇನೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪ ಗೌಡರು.—ಸ್ಥಳೀಯ ಸಂಸ್ಥೆಗಳಿಗೆ ಹಾಲು ಈಗ ಬರುತ್ತಿರುವ ಉತ್ಪತ್ತಿಯೂ ನೀವೀಗ ಕೊಡುವುದರ ಜೊತೆಗೆ ಸೇರುತ್ತದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು, ಸೇರುತ್ತದೆ.

Mr. SPEAKER.—Motion moved:

"That the Mysore Village Panchayets and District Boards Bill, 1951, be referred to a Select Committee consisting of the following Members:

Rajamantrapravina H. B. Gundappa Gowda,

Sri H. M. Channabasappa.
Sri H. K. Veeranna Gowda.
Sri S. Rangaramiah.
Sri H. C. Linga Reddy.
Sri M. Govinda Reddy.
Sri M. Madiah.
Lokasevaniratha M. Hanumanthiah.
Sri Mudduramiah.,
Sri B. Hutche Gowda."

Janab J. MOHAMED IMAM (Chitaldrug *cum* Tumkur-Muslim).—I propose the name of Sri B. Channabyre Gowda.

Sri M. V. KRISHNAPPA (Kolar District—General).—I propose the names of Sri Boranna Gowda and Sri Mali Mariappa in addition.

Sri R. CHENNIGARAMIAH.—I have no objection to the inclus on of the above members.

ಮುಷೀರ್ ಉಲ್-ಮುಲ್ಕ್ ಜನಾಬ್ ಜೆ. ಮಹಮದ್ ಇಮಾಂರವರು.—ಸ್ವಾಮಿ, ಈ ಬಿಲ್ಲಿನ ವಿಷಯದಲ್ಲಿ ನಾನಿನ್ನೂ ಸರಿಯಾಗಿ ಓದಿಲ್ಲವೆಂದು ಮುಚ್ಚು ಮರೆಯಿಲ್ಲದೆ ಅರಿಕೆ ಮಾಡಿಕೊಳ್ಳುತ್ತೇನೆ. I must plainly confess that I have not read this Bill. ಈ ಮನೂದೆ ಇವತ್ತು ಸಭೆಯ ಮುಂದೆ ಬರುತ್ತದೆಂದು ನನಗೆ ಗೊತ್ತಾಗಲಿಲ್ಲ. But this is a very important Bill and it has to be studied carefully. ಆದ್ದರಿಂದ ನಾಳೆ ಇದನ್ನು ತೆಗೆದುಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಯಾರಾದರೂ ಮಾತಾಡಲಿ, ಇನ್ನೂ 15 ನಿಮಿಷ ಇದೆಯಲ್ಲಾ.

ಜನಾಬ್ ಜೆ. ಮಹಮದ್ ಇಮಾಂರವರು.—ಇವತ್ತು ನಾನು ಮಾತನಾಡುವ ಹಾಗಿಲ್ಲ, ನಾಳೆ ಅವಕಾಶ ಕೊಡಬೇಕು.

Sri H. C. LINGA REDDY (Kolar District—General).—Mr. Speaker, Sir, while I wholeheartedly welcome this Bill, I would like to say a few words on the main features of the Bill. It is very appropriate that the Local Self-Government institutions in our State also should be recognised just after the introduction of the Indian Constitution in our country. We are aware, Sir, that the Constitution is modelled on the basis of adult franchise and so also now when we have got to reorganise the Local Self-Government institutions, the very same principle will have to be accepted and the Local Self-Government institutions will have to work also in the same spirit. But with regard to the franchise that has been suggested in the District Boards Act, I would like to say that the indirect election is not so democratic and will not work so well. For the District Boards we are not used to this sort of indirect election hitherto. The voters for the election of the District Board members will be Village Panchayat members. There will be 15 to 20 members. It will be possible for influential sections and reactionary elements to get into the District Boards.

Mr. SPEAKER.—15 to 20 for one Panchayet. Not for the whole Taluk?

Sri H. C. LINGA REDDY.—But there will not be many adult voters if the method of election is indirect. It would be easy for influential and rich people to get into the District Boards if the franchise is to be so restricted. We also know the village politics where with the help of the 'poot' lawyers and Patels and Shanbhogues, whom there is a chance of purchasing vote.

Sri G. A. ACHARYA.—I want the definition of 'poot' lawyers Sir.

Sri H. C. LINGA REDDY.—The term is so common that I need not explain it.

Janab MOHAMED HANIEF.—I too want to know the meaning of that word Sir.

Sri L. SIDDAPPA (Shimoga District—General)—It is common in rural parts but the urban gentlemen do not understand the meaning of it.

Sri H. C. LINGA REDDY.—It is very surprising that it is only lawyers that are raising objection. The technical meaning of the word is 'tout'.

Sri B. HUTCHE GOWDA.—He says, 'reactionary elements'. Who are they Sir?

Sri H. C. LINGA REDDY.—I meant those people who are very rich and very influential and opposed to democratic and progressive views. These are terms with which we are all very conversant. In villages these influential people get into District Boards and it would be very difficult for progressive forces and democratic forces to function at all properly.

Again Sir, there is another feature which I think is not correct, *i.e.*, the

(SRI H. C. LINGA REDDY.)

number of members to constitute a Village Panchayet is suggested to be 15 to 20. That will be a very big number. In villages we do not have sufficiently educated people and if there were to be 15 to 20 members in a Village Panchayet, it would be very unwieldy. At present, there will be about 7 to 10 people. That is all. Now the population for each Panchayat will be 2,000 to 5,000. This number also, I think, will be very unwieldy. Even for District Boards.....

The Hon'ble Sri R. CHENNIGA-RAMIAH.—Two thousand to Five thousand not in one village, but in a group of villages.

Sri H. C. LINGA REDDY.—It will be a very big number, and for the District Boards also, for every 25,000 one member is calculated. At this rate, there will be 3 or 4 members for each taluk and for the whole District there will be an assembly of 40-50 members. That again will be a very big number. I think the District Board cannot be businesslike and hence cannot function properly and efficiently. Therefore, this number has got to be reduced.

The Hon'ble Sri R. CHENNIGA-RAMIAH.—I just want to clarify one position. The Hon'ble Member said that the population of each Village Panchayet is proposed to be about 2,000 to 5,000 either in one village or in a group of villages. It is not like that. If any particular village has got more than 3,000 people, it becomes a municipality. If the population of a group of villages is 5,000 then it becomes a Panchayat.

Sri L. SIDDAPPA.—Is it obligatory? For instance, Santhebannur in Channagiri Taluk has a population of more than 10,000. It is a Village Panchayat.

Sri H. C. LINGA REDDY.—The powers of the Chief Executive Officer contemplated under the Act and the powers of the Deputy Commissioner overlap and there is room for conflict of decisions very often. The Chief Executive Officer and also the President, and the Deputy Commissioner and the Government will have concurrent powers with regard to so many matters and it appears as though there will be a tug of war between the Chief Executive Officer and the President of the Board. We have been hearing of various complaints between the Commissioner and the President of Bangalore City and Mysore City Municipalities and also in Town Municipalities there will be a tug of war between the Chief Officer and the President. We will be again giving room for this sort of conflict of decision and efficiency of work will to a very great extent suffer. Therefore, the Select Committee which is going to go through all these matters, will have to see that the decisions and powers of these functionaries do not overlap with one other in the interests of efficient work.

Sri H. B. GUNDAPPA GOWDA.—Then whom do you intend to be the head in the case of District Board?

Sri H. C. LINGA REDDY.—The President himself to a very great extent should carry out the decisions of the District Board. But we do not have a Chief Executive Officer now. It may be necessary to have a Chief Executive Officer, but not to the extent to which their powers, their decisions overlap each other so as to come into conflict.

The Hon'ble Sri R. CHENNIGA-RAMIAH.—We have got Chief Executive Officers in all big local bodies, for instance in the Corporation of Bangalore and Madras and they are all functioning.

Sri H. C. LINGA REDDY.—But not in District Boards. There is one other provision in the Act, *viz.*, Section 182, that makes us feel as though the term of the present District Boards will continue and there will be no room for fresh District Boards to come into operation very early. Section 182 contemplates that the present District Boards will continue till this Act comes into operation. The present District Boards are already serving an extended term and if this Act is not brought into force immediately, I think there will be very strong opposition in the country and it is very necessary that this Act should come into operation very early so that further extension indirectly or in a way may not be

necessary for the present District Boards.

The Hon'ble Sri R. CHENNIGARAMIAH.—There is no question of extension now.

Sri H. C. LINGA REDDY.—That is why I say 'indirectly or in a way.' If the Government can give so much assurance, then I do not refer to that matter at all. Avoid the continuation of the term of the present District Boards.

The Hon'ble Sri R. CHENNIGARAMIAH.—That is the intention of the Government at any rate.

Sri H. C. LINGA REDDY.—One other feature that I would like to point out is this. We have seen good many District Boards in the State raising a cry and a clamour almost for the attachment of an Executive Engineer and a staff to the District Boards. For the Mysore District Board, an Executive Engineer has been sanctioned and the work of that District Board is very satisfactorily being carried out.

The Hon'ble Sri R. CHENNIGARAMIAH.—Assistant Engineer, not Executive Engineer.

Sri H. C. LINGA REDDY.—All the same, there is not much difference. But here in this Bill there is no provision for any such Engineering staff being independently attached to the District Board. We know how the decisions, how the resolutions of the District Boards are not being carried out by the Public Works Department and how difficult it would be for the District Board to have its decisions and resolutions carried into effect. Therefore, it will be very necessary that there should be an Executive Engineer or an Assistant Engineer and sufficient staff to put into execution the various works of the District Boards in the Districts. With these few words, I welcome this Bill.

Mr. SPEAKER.—Shall we resume discussion on this Bill to-morrow?

SEVERAL MEMBERS:—Yes.

Mr. SPEAKER.—Discussion on this Bill will continue to-morrow.

The House will now adjourn and meet to-morrow at One of the Clock.

The Assembly adjourned after Six of the Clock to meet again at One of the Clock on Thursday, 25th January 1951.

WD 2915—GPB—500—26-2-51